॥धर्मो रक्षति रक्षितः॥

# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XXIV No. 2 | May 2016 | Pages 16 | **Rs. 2/-**




**Editorial** 2

ಶ್ರೀ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿಗೆ ಪಾತ್ರರಾದ ತೆಂಕನಿಡಿಯೂರಿನ ಕುಳವಾರಿ - ಡಾ. ವ್ಯಾಸರಾವ್ ನಿಂಜೂರ್ ರಮಾ ಉಡುಪ 3

ಸಂಸ್ಕೃತ ಸಾಹಿತ್ಯದ ಹಿರಿಮೆ 4

**Dark Energy and Dark Matter** - L. V. Shastri 6

**Satyameva Jayate** - Rati Hegde 8

**Change of Address** 9

ಎತ್ತಿದ ಕೈ - ಅಮಿತಾ ಎಸ್. ಭಾಗವತ್ 10

ಸಂಕ್ಷಿಪ್ತ ಸುದ್ದಿಗಳು 13

**Gravitational Waves - Swetha Bhagwat** 16

## Forthcoming Event - KVSS Award Function on 26th June 2016

*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T.*

**"Havyaka Sandesha"** is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆2665 2591

***Hon. Editor*** : Smt. Amita S. Bhagwat

***Editorial Committee*** { R. M. Shastri, Smt. Shashikala Hegde, Smt. Tanuja Hegde, Smt. Uma Swamy

***Publisher*** : Narayan Akadas R., Hon. Gen. Secretary

***Printed at*** : M/s. Navin Printers, Mumbai - 400 016. ✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, benefactor (BN) Rs.3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2015-2016**

***President*** : Shivkumar P. Bhagwat
***Vice - President*** : Sanjay Bhat
***Hon. Gen. Secretary*** : Narayan Akadas
***Hon. Jt. Secretary*** : R. M. Shastri, Dombivli
***Hon. Treasurer*** : A. G. Bhat

***Elected Members :***

Smt. Tanuja Hegde, Suresh Hegde, Smt. Shashikala Hegde, R. N. Kameshwar, Gautam Upadhya, Smt. Uma Swamy, Keshav Hegde, Chidanand Bhagwat, Umesh Hegde

**Co-opted Member :** Shri A. K. Bhat

***ಸಂಪಾದಕೀಯ***

# ಬೇಸಿಗೆಯ ಶಿಬಿರಗಳು

ಮಧ್ಯಾಹ್ನ ಉರಿ ಬಿಸಿಲಿನ ಝಳಕ್ಕೆ ಕಣ್ಣುಗಳು ಬಾಡುತ್ತವೆ. ಕಣ್ಣುಗಳು ಮುಚ್ಚುತ್ತಾ ಮಂಪರು ಕವಿಯುತ್ತಿದ್ದಂತೆ ಎಲ್ಲಿಂದಲೋ ಮಾವಿನ ಹಣ್ಣು ಡಬ್ಬೆಂದು ಉರುಳಿದ ಸದ್ದು! ಅದೇನು ಕನಸಾ! ಅಲ್ಲ; ಬಹುಶಃ ಬಾಲ್ಯದ ನೆನಪು.

ಮರದಿಂದ ಕೆಳಗೆ ಉದುರಿದರೆ ಅದನ್ನು ಎತ್ತಲು ಓಡಿ ಬರುವ ಮಕ್ಕಳ ಸಂಖ್ಯೆ ಅದೆಷ್ಟು! ಯಾವ ಮರದ ಹಣ್ಣು ಎಷ್ಟು ಸಿಹಿ ಎನ್ನುವುದು ಕರಾರುವಕ್ಕಾಗಿ ಗೊತ್ತಿರುತ್ತಿತ್ತು. ಆ ಹಣ್ಣು ನಮ್ಮ ಕೈಗೇ ಸಿಗಬೇಕು ಎನ್ನುವ ಅಭಿಲಾಷೆ. ಉಳಿದವರೊಡನೆ ಪೈಪೋಟಿ. ಬಿದ್ದ ಹಣ್ಣು ಜಜ್ಜಿ ಹೋದರೂ ಅದರ ಸವಿಯೇನು ಕಡಿಮೆಯಾಗುತ್ತದೆಯೇ? ಹಳ್ಳಿಯ ಮಣ್ಣು ರಸ್ತೆಯ ಮೇಲೆ ನಡೆಯುವಾಗ ಪೊದೆಗಳಿಂದ ಇಣುಕಿ ನೋಡುವ ಕಾಡು ಹಣ್ಣುಗಳ ಮೇಲೆಯೇ ದೃಷ್ಟಿ ನೆಟ್ಟು ಹೋಗುತ್ತಿತ್ತು. ಬುಟ್ಟಿಯನ್ನು ಕೈಯಲ್ಲಿ ಹಿಡಿದುಕೊಂಡು ಅಲ್ಪಸ್ವಲ್ಪ ಮುಳ್ಳುಗಂಟಿಗಳಿಂದ ಮೈಯನ್ನು ಪರಚಿಕೊಳ್ಳಿಸುತ್ತ ವಿವಿಧ ಹಣ್ಣುಗಳನ್ನು ತುಂಬಿಸಿಕೊಂಡು ಬಂದರೆ ಅದೇ ಒಂದು ಸಾಹಸಗಾಥೆಯಾಗುತ್ತಿತ್ತು.

ಆಗ ಮಕ್ಕಳಿಗೆ ಹುಣಿಸೆ ಮರಕ್ಕೆ ಕಲ್ಲು ಹೊಡೆದು ಹಣ್ಣನ್ನು ಉರುಳಿಸುವುದು ಆಟವಾದರೆ ಈಗಿನ ಕಾಲದ ಮಕ್ಕಳ ಪರಿಣತಿಯು ಬೇರೆ ರೀತಿಯದು. ಅವರಿಗೆ ರಸ್ತೆಯ ಮೇಲೆ ಓಡಾಡುವ ಎಲ್ಲಾ ಕಾರುಗಳ ಹೆಸರು ಗೊತ್ತು. ಅಷ್ಟೇ ಅಲ್ಲ, ಎಲ್ಲಾ ಕಾರುಗಳ ಚಿಹ್ನೆಯೂ ಗೊತ್ತು. ಕ್ರಿಕೆಟ್ ಆಟವಷ್ಟೇ ಅಲ್ಲ ಎಲ್ಲ ಆಟಗಾರರ ಚರಿತ್ರೆಯೂ ಗೊತ್ತು. ಆದರೆ ಕುಂಟಾಟ, ಲಗೋರಿ, ಗಿಲ್ಲಿದಾಂಡು, ಕಬಡಿ ಮೊದಲಾದ ಆಟಗಳ ಪರಿಚಯ ಮಾತ್ರ ವಿರಳ. ಅವರಿಗೆ ನಿಸರ್ಗದ ಪರಿಚಯವೂ Discovery Channel ಗಳ ಮೂಲಕ.

ವರ್ಷವಿಡೀ ಶಾಲೆಗೆ ಭಾರವಾದ ಬ್ಯಾಗನ್ನು ಹೊತ್ತು, ಟ್ಯೂಶನ್ ಕ್ಲಾಸುಗಳ ನಡುವೆಯೂ ಸಮಯದ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತ ಅಲ್ಲಿಯೂ ಹವ್ಯಾಸವನ್ನು ಬೆಳೆಸಿಕೊಳ್ಳುವ ಕ್ಲಾಸುಗಳನ್ನು ಸೇರಿಕೊಳ್ಳುತ್ತ, ದಿನ ಕಳೆಯುವ ಪುಟಾಣಿಗಳಿಗೆ ಬೇಸಿಗೆ ಬಂದಿತೆಂದೊಡನೆ ಸಂಭ್ರಮವೇ ಸರಿ. ಆದರೂ ಊರಿನಲ್ಲಿ ಅವರ ಅಜ್ಜ, ಅಜ್ಜಿಯೋ, ಮಾವ, ಅತ್ತೆ, ದೊಡ್ಡಪ್ಪ, ದೊಡ್ಡಮ್ಮ ಕಾಯುತ್ತಿದ್ದರೆ ಅವರ ಉತ್ಸಾಹಕ್ಕೆ ಇಂಬು ಬಂದಂತೆ.

ನೈಸರ್ಗಿಕ ಸೌಂದರ್ಯವನ್ನು ನಮ್ಮ ಕಾವ್ಯಗಳಲ್ಲಿ ಎಷ್ಟು ಥಾಳಾಗಿ ವರ್ಣಿಸಿದರೂ ಹಿಂದಿನ ಕಾಲದಿಂದಲೂ ಪಟ್ಟಣಗಳಿಗೆ ಅವುಗಳದ್ದೇ ಆದ ಪ್ರಾಮುಖ್ಯತೆ ಇತ್ತು. 'ವನವಾಸ'ವನ್ನು ದಂಡನೆಯ ರೂಪದಲ್ಲಿ ವಿಧಿಸಿ ಕಾಡಿಗಟ್ಟಲಾಗುತ್ತಿತ್ತು. 'ವನವಾಸ'ವೆಂದರೆ ಕಷ್ಟವನ್ನು ಬಣ್ಣಿಸುವ ಪದವಾಗಿತ್ತು. ಅಂದ ಮೇಲೆ 'ನಗರಗಳ' ಆಕರ್ಷಣೆ ಮೊದಲಿನಿಂದಲೂ ಇತ್ತು. ಆದರೆ 'ವನವಿಹಾರ'ವೂ ಕೂಡ ಜೀವನದ ಅಂಗವಾಗಿರುತ್ತಿತ್ತು. ಇಂದು ನಮಗೆ ನಗರದಲ್ಲಿದ್ದರೂ ಕೂಡ ದೊಡ್ಡ ದೊಡ್ಡ ಹೊಟೇಲ್‌ಗಳು, Amusement Park ಗಳಷ್ಟೇ ವಿಹಾರವಾಗಿಬಿಟ್ಟಿವೆ. ನಗರದ ಕಣ್ಣು ಕುಕ್ಕುವ ಬೆಳಕಿನಲ್ಲಿ ಪ್ರದೂಷಿತ ಹವೆಯನ್ನು ಉಸಿರಾಡಿಸುವ ನಮಗೆ ಕಣ್‌ತಣಿಸುವ ನಿಸರ್ಗದ ಬಣ್ಣ, ಶುದ್ಧವಾದ ಹವೆ ಸೆಳೆಯುವುದೇ ಇಲ್ಲ.

ನಗರಗಳಲ್ಲಿಯೂ ಮಕ್ಕಳಲ್ಲಿ ಕ್ರಿಯಾಶೀಲತೆಗೆ, ಕಲ್ಪನಾ ಶಕ್ತಿಗೆ ಚಾಲನೆ ನೀಡುವ ಅನೇಕ ಬೇಸಿಗೆ ಶಿಬಿರಗಳು (Summer Camps) ಹುಟ್ಟಿಕೊಳ್ಳುತ್ತಿವೆ. ಆದರೂ ಮಕ್ಕಳಿಗೆ ನಮ್ಮ ದೇಶದ ಕಲ್ಪನೆ ಮೂಡಬೇಕಾದರೆ ಅವರಿಗೆ ಹಳ್ಳಿಗಳ ಪರಿಚಯವಾಗಲೇ ಬೇಕು. ನಾವು ಪರಿಸರವನ್ನು ಕಾಪಾಡಬೇಕು ಎನ್ನುವ 'ಪ್ರಣಾಲಿಕೆ' ಹಾಡುವಾಗ 'ಪರಿಸರ'ವೆಂದರೇನು ಎನ್ನುವ ಅರಿವನ್ನು ಮಕ್ಕಳಿಗೆ ನಾವು ಮಾಡಿಕೊಡಬೇಕಲ್ಲವೇ?

ಮಕ್ಕಳ ರಜಾದಿನಗಳು ಹಳ್ಳಿಯಲ್ಲಿರುವ ನಮ್ಮ ಅಥವಾ ನಮ್ಮವರ ಮನೆಗಳಲ್ಲೂ ಕಳೆಯಲಿ ಎನ್ನುವ ಆಶಯ ವ್ಯಕ್ತಪಡಿಸುತ್ತೇನೆ.

ಅಮಿತಾ ಎಸ್ ಭಾಗವತ್

e-mail : amitabhagwat@gmail.com

*PAGE DONATED BY :* ***ADVOCATE M. S. PANDIT*** *PUNE*

# ಶ್ರೀ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿಗೆ ಪಾತ್ರರಾದ ತೆಂಕನಿಡಿಯೂರಿನ ಕುಳವಾರಿ - ಡಾ. ವ್ಯಾಸರಾವ್ ನಿಂಜೂರ್

✍ ರಮಾ ಉಡುಪ

ಮುಂಬಯಿ ಮಹಾನಗರ ಸುಮಾರು ಹದಿನೆಂಟನೆ ಶತಮಾನದಿಂದ ದೇಶದಾದ್ಯಂತದಿಂದ ಯುವಕರನ್ನು ಉದ್ಯೋಗಕ್ಕಾಗಿ ತನ್ನತ್ತ ಸೆಳೆಯುತ್ತಾ ಬಂದಿದೆ. ನಮ್ಮ ಕರ್ನಾಟಕ ರಾಜ್ಯದಿಂದಲೂ ಮುಖ್ಯವಾಗಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದ ಅವ್ಯಾಹತವಾಗಿ ಜನಸ್ತೋಮವೇ ಹರಿದು ಬಂದಿದೆ. ಹೀಗೆ ಮುಂಬಯಿ ಸೇರಿದ ಯುವಕರು ತಮ್ಮ ಪ್ರಾಮಾಣಿಕ ದುಡಿಮೆಯಿಂದ ತಾವು ಆರಿಸಿಕೊಂಡ ಕ್ಷೇತ್ರದಲ್ಲಿ ಉನ್ನತ ಮಟ್ಟದವರೆಗೆ ಏರಿದ್ದಾರೆ. ಅಷ್ಟೇ ಅಲ್ಲದೆ ಸಾಂಸ್ಕೃತಿಕ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕನ್ನಡದ ಸೇವೆ ಮಾಡಿದ್ದಾರೆ. ಇದಕ್ಕೊಂದು ಒಳ್ಳೆಯ ನಿದರ್ಶನ ಡಾ. ವ್ಯಾಸರಾವ್ ನಿಂಜೂರರವರದ್ದು.

ಅರವತ್ತರ ದಶಕದಲ್ಲಿ, ಉಡುಪಿಯಲ್ಲಿ ವಿಜ್ಞಾನದ ಪದವಿ ಮುಗಿಸಿ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ದುಡಿಯುತ್ತಿದ್ದಾಗ ಮುಂಬೈಯಲ್ಲಿರುವ ದೇಶದ ಅತ್ಯಂತ ಗೌರವಾನ್ವಿತ ಸಂಸ್ಥೆ ಭಾಭಾ ಅಣುಶಕ್ತಿ ಕೇಂದ್ರ ಉನ್ನತ ವಿದ್ಯಾಭ್ಯಾಸದ ಅವಕಾಶ ಮತ್ತು ನೌಕರಿ ಎರಡನ್ನೂ ನೀಡಿ ನಿಂಜೂರ್‌ರವರನ್ನು ಮುಂಬಯಿಗೆ ಕರೆಸಿಕೊಂಡಿತು. ತಮ್ಮ ಇಪ್ಪತ್ತೈದನೇ ವಯಸ್ಸಿನಲ್ಲಿ ಮುಂಬೈ ಸೇರಿದ ನಿಂಜೂರರು ಮುಂದೆ ಇಪ್ಪತ್ತೈದು ವರ್ಷ ಬಿ.ಎ.ಆರ್.ಸಿ.ಯಲ್ಲಿ ಬಯೋ ಕೆಮಿಸ್ಟ್ರಿ ಮತ್ತು ಫುಡ್ ಟೆಕ್ನಾಲಜಿ ವಿಭಾಗದಲ್ಲಿ ಉತ್ತಮ ವಿಜ್ಞಾನಿಯಾಗಿ ಬೆಳೆದರು. ವೈಜ್ಞಾನಿಕ ನಿಯತ ಕಾಲಿಕೆಗಳಲ್ಲಿ ಎಂಬತ್ತೇಳಕ್ಕೂ ಹೆಚ್ಚಿಗೆ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಕೆಥಪ್ಸಿನ್ ಬಿ.೨ ಎನ್ನುವ ಕಿಣ್ವದ ಕಾರ್ಯವಿಧಾನವನ್ನು ಮೊತ್ತ ಮೊದಲಿಗೆ ಶ್ರುತಪಡಿಸಿದ ಶ್ರೇಯಸ್ಸು ಅವರದ್ದು. ಈ ಕಿಣ್ವವನ್ನು ಮೊದಲಿಗೆ 'ನಿಂಜೂರ್ ಕಿಣ್ವ' ಎಂದೇ ಕರೆಯಲಾಗುತ್ತಿತ್ತು. ಜೀವ ರಸಾಯನ ಮತ್ತು ಆಹಾರ ತಂತ್ರಜ್ಞಾನ ವಿಭಾಗದಲ್ಲಿ ಇಪ್ಪತ್ತಾರು ವರ್ಷ ಸಂಶೋಧಕರಾಗಿ, ಶಿಕ್ಷಕರಾಗಿ, ಸಂಶೋಧನಾ ಮಾರ್ಗದರ್ಶಕರಾಗಿ ದುಡಿದು ತಮ್ಮ ಐವತ್ತೊಂದನೇ ವಯಸ್ಸಿನಲ್ಲಿ ಸ್ವಯಂ ನಿವೃತ್ತಿ ಹೊಂದಿ ಈಗ ತಮ್ಮ ಜೀವನವನ್ನು ಕನ್ನಡದ ಸೇವೆಗಾಗಿ ತೊಡಗಿಸಿಕೊಂಡಿದ್ದಾರೆ.

ವೃತ್ತಿಯಲ್ಲಿ ವಿಜ್ಞಾನಿಯಾದರೂ ಪ್ರವೃತ್ತಿಯಲ್ಲಿ ಸಾಹಿತಿಯಾಗಿ ಗುರುತಿಸಿಕೊಂಡವರು ವ್ಯಾಸರಾವ್ ನಿಂಜೂರ್. ಶಾಲಾ ದಿನಗಳಲ್ಲೇ ಉತ್ತಮ ಕಾದಂಬರಿಗಳನ್ನು ಓದಿ, ಓದುವ ಸದಭಿರುಚಿ ಬೆಳೆಸಿಕೊಂಡರು. ಶಾಲಾದಿನದಲ್ಲೇ ಸಣ್ಣಪುಟ್ಟ ಕವನಗಳ ರಚನೆಯಿಂದ ತಮ್ಮ ಗುರುಗಳ ಗಮನವನ್ನು ಸೆಳೆದಿದ್ದರು. ಕಾಲೇಜಿನ ದಿನಗಳಲ್ಲಿ 'ಸಗ್ರಿ ಸೆಂಟಿನಲ್' ಎನ್ನುವ ಪಾಕ್ಷಿಕ ಭಿತ್ತಿ ಪತ್ರಿಕೆಯಲ್ಲಿ ತಮ್ಮ ಗೆಳೆಯ ಈಶ್ವರಯ್ಯನವರೊಡಗೂಡಿ 'ಕಬ್ಬಿಣದ ಕಡಲೆ' ಎನ್ನುವ ಜನಪ್ರಿಯ ಲೇಖನ ಬರೆಯುತ್ತಿದ್ದರು. 1963ರಲ್ಲಿ ಅವರ ಮೊದಲ ಕಥಾ ಸಂಕಲನ 'ಕುಂಕುಮ' ಪ್ರಕಟವಾಯಿತು. ಕುಂಕುಮ ಕಥಾ ಸಂಕಲನ ಪ್ರಕಟವಾದ ನಾಲ್ಕು ವರ್ಷದ ನಂತರ ಧಾರವಾಡದ ಮನೋಹರ ಗ್ರಂಥಮಾಲೆಯ ಜಿ.ಬಿ. ಜೋಶಿಯವರು ಒತ್ತಾಯದಿಂದ ಬರೆಸಿದ ಅವರ ಮೊದಲ ಕಾದಂಬರಿ 'ಉಸಿರು' ಪ್ರಕಟಗೊಂಡಿತು. ಸುಮಾರು ಎಂಬತ್ತಕ್ಕೂ ಹೆಚ್ಚು ಸಣ್ಣ ಕತೆಗಳನ್ನು ಬರೆದಿದ್ದರೂ ಇದುವರೆಗೆ ಕೇವಲ ಮೂರು ಕಥಾ ಸಂಕಲನಗಳು ಪ್ರಕಟವಾಗಿವೆ. ಅವರ ಎರಡನೆ ಕಾದಂಬರಿ 'ಶ್ರೀ ಚಾಮುಂಡೇಶ್ವರಿ ಭವನ' 1991ರಲ್ಲಿ ಪ್ರಕಟಗೊಂಡಿತು. ಈಗ ಅವರ ಮೂರನೇ ಕಾದಂಬರಿ 'ತೆಂಕನಿಡಿಯೂರಿನ ಕುಳವಾರಿಗಳು' ಪ್ರಕಟಣೆಯ ಹಂತದಲ್ಲಿದೆ.

ಅರವತ್ತರ ದಶಕದಲ್ಲಿ ನವ್ಯದ ಪ್ರಭಾವದಿಂದ ಸಣ್ಣ ಕತೆಗಳನ್ನು ಬರೆಯಲು ಪ್ರಾರಂಭಿಸಿದ ನಿಂಜೂರ್‌ರವರು ಕ್ರಮೇಣ ಯಾವ 'ವಾದ'ದ ಬೆನ್ನು ಹತ್ತದೆ ತಮ್ಮದೇ ಆದ ಹಾದಿಯಲ್ಲಿ ತಮ್ಮ ಅನುಭವದ ಮೂಸೆಯಿಂದ ಹೊರಬಂದ ಕತೆಗಳನ್ನು ಬರೆಯಲಾರಂಭಿಸಿದವರು. ದಕ್ಷಿಣ ಕನ್ನಡದ ವಿವಿಧ ಸಮುದಾಯಗಳ ಕುಟುಂಬದ ಕತೆಗಳು, ಜೀವನೋಪಾಯಕ್ಕಾಗಿ ಊರು ಬಿಟ್ಟು ಮುಂಬಯಿ ಸೇರಿದ ನವ ಯುವಕರ ತವಕ ತಲ್ಲಣಗಳು, 70-80ರ ದಶಕದಲ್ಲಿ ವಿದೇಶದ ನೆಲದಲ್ಲಿ ನೆಲೆಸಿದ 'ಇಂಟೆಲಿಜೆಂಟ್' ಯುವಕರ ತಾಕಲಾಟಗಳು - ಹೀಗೆ ಗ್ರಾಮೀಣ ಪರಿಸರ, ಸದಾ ಎದ್ದಿರುವ ಮುಂಬಯಿ, ಭಿನ್ನ ಸಂಸ್ಕೃತಿಯ ಹೊರದೇಶದ ಚಿತ್ರಣವನ್ನು ಪರಿಪೂರ್ಣವಾಗಿ ಚಿತ್ರಿಸಬಲ್ಲವರು. ಅವರ ಅದ್ಭುತವಾದ ವ್ಯಕ್ತಿ ಚಿತ್ರಣ, ಪರಿಸರ ವರ್ಣನೆ, ತಿಳಿ ಹಾಸ್ಯ ಬೆರೆತ ಸಂಭಾಷಣೆ ದಕ್ಷಿಣ ಕನ್ನಡಕ್ಕೇ ಮೀಸಲಾದ ಹೊಗಳಿಕೆ-ತೆಗಳಿಕೆಗಳು ಓದುಗರ ಗಮನ ಸೆಳೆಯುತ್ತವೆ.

ರಂಗಭೂಮಿಯಲ್ಲಿ ಅಪರಿಮಿತ ಆಸಕ್ತಿ ಇರುವ ನಿಂಜೂರರು ಕೆಲವು ನಾಟಕಗಳನ್ನು ರಚಿಸಿದ್ದಾರೆ. ಅವರ 'ನಲವತ್ತರ ನಲುಗು' ನಾಟಕ ತೊಂಬತ್ತರ ದಶಕದಲ್ಲಿ ಹನ್ನೊಂದು ಯಶಸ್ವೀ ಪ್ರದರ್ಶನಗೊಂಡಿದೆ. ಅವರು 8-10 ನಾಟಕಗಳನ್ನು ರಚಿಸಿದ್ದರೂ ಪ್ರಕಟವಾಗಿರುವುದು 'ನಲವತ್ತರ ನಲುಗು' ಮಾತ್ರ.

ನಿಂಜೂರರು ಸ್ವಯಂ ನಿವೃತ್ತಿ ಪಡೆದ ನಂತರ ಸುಮಾರು ಎರಡು ದಶಕಗಳ ಕಾಲ ಮುಂಬಯಿಯ ಬಿ.ಎಸ್.ಕೆ.ಬಿ. ಅಸೋಸಿಯೇಶನ್‌ನ ಮುಖವಾಣಿಯಾದ 'ಗೋಕುಲ ವಾಣಿ' ಮಾಸಿಕಕ್ಕೆ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದರು. ಮಧ್ಯೆ ಕೆಲವು ವರ್ಷದ ವಿಶ್ರಾಂತಿಯ ನಂತರ ಈಗ ಪುನಃ ಗೋಕುಲವಾಣಿಯ ಸಂಪಾದಕತ್ವದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಅವರ ಸಂಪಾದಕೀಯ ಬರಹದಿಂದ ಆಯ್ದು ಲೇಖನಗಳನ್ನು 'ಆಗಾಗ ಅನಿಸಿದ್ದು' ಎನ್ನುವ ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ. ನಿಂಜೂರರು ಗೋಕುಲವಾಣಿಯನ್ನು ಕೇವಲ ಬಿ.ಎಸ್.ಕೆ.ಬಿ.ಯ ಕಾರ್ಯ ಕಲಾಪಗಳನ್ನು ವರದಿ ಮಾಡುವ ಮುಖಪತ್ರಿಕೆಯನ್ನಾಗಿಯಷ್ಟೇ ಸೀಮಿತಗೊಳಿಸದೆ ಅದರಲ್ಲಿ ಸಾಹಿತ್ಯಕ್ಕೂ ಎಡೆಮಾಡಿಕೊಟ್ಟು ಅದರ ಗುಣಮಟ್ಟವನ್ನು ಗುರುತರವಾಗಿ ಊರ್ಜಿತಗೊಳಿಸಿದ್ದಾರೆ.

**ಪುಶಸ್ತಿ ಪುರಸ್ಕಾರಗಳು** : ನಿಂಜೂರರ 'ಶ್ರೀ ಚಾಮುಂಡೇಶ್ವರಿ ಭವನ' ಕಾದಂಬರಿಗೆ 1991 ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿದೆ. 'ಉಸಿರು' ಕಾದಂಬರಿಗೆ ತ್ರಿವೇಣಿ ಸ್ಮಾರಕ ಬಹುಮಾನ ದೊರೆತಿದೆ. ಮುಂಬಯಿಯ ಬಿಲ್ಲವರ ಸಂಘದವರು 'ಗುರುನಾರಾಯಣ' ಪ್ರಶಸ್ತಿ ನೀಡಿದ್ದಾರೆ. ಮೂಡಬಿದಿರೆಯಲ್ಲಿ ನಡೆಸುವ 'ಆಳ್ವಾಸ್ ನುಡಿಸಿರಿ' ಕಾರ್ಯಕ್ರಮದ ದಶಮಾನೋತ್ಸವದ ಸಂದರ್ಭದಲ್ಲಿ ನಿಂಜೂರರನ್ನು ಸನ್ಮಾನಿಸಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿಯ ಫೆಲೋಶಿಪ್, ಅಖಿಲ ಭಾರತ 71ನೇ ಸಾಹಿತ್ಯ ಸಮ್ಮೇಳನದಲ್ಲಿ 'ಕರ್ನಾಟಕ ಶ್ರೀ' ಪ್ರಶಸ್ತಿ, ಮಹಾರಾಷ್ಟ್ರ ರಾಜ್ಯ ಕನ್ನಡಿಗರ ಆರನೆಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮಾವೇಶದಲ್ಲಿ ಸಾಹಿತ್ಯ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲಿನ ಕೊಡುಗೆಗಾಗಿ 'ಮಹಾರಾಷ್ಟ್ರದ ಶ್ರೇಷ್ಠ ಕನ್ನಡಿಗ' ಪ್ರಶಸ್ತಿ ದೊರಕಿದೆ. ಉಡುಪಿ ಜಿಲ್ಲೆಯ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವ ಗೌರವವೂ ಸಂದಿದೆ. ಶ್ರೀಕೃಷ್ಣ-ವಿಠಲ ಪ್ರತಿಷ್ಠಾನ ಪ್ರಶಸ್ತಿ ಮತ್ತು ಜಯಂತಿ ಕುರ್ಕಾಲ್ ಸಾಹಿತ್ಯ ಪ್ರಶಸ್ತಿಗಳಿಗೂ ಭಾಜಕರಾಗಿದ್ದಾರೆ. ಇದೀಗ 'ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿ (2016-17)'ಗೆ ಅವರು ಆಯ್ಕೆಯಾಗಿದ್ದಾರೆ. ಮುಂಬಯಿಯ ಯಾವುದೇ ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವ್ಯಾಸರಾಯರ ಹಸನ್ಮುಖವನ್ನು ಕಾಣಬಹುದು. ನಿಂಜೂರ್‌ರವರದು ಸಂಕೋಚ ಪ್ರವೃತ್ತಿ. ಅವರು ಮಿತಭಾಷಿ. ಬೇರೆಯವರ ಕಷ್ಟ ಕಾರ್ಪಣ್ಯಗಳಿಗೆ ಕರಗುವ ಸಜ್ಜನ. ಅವರ ವಿನಯಶೀಲ ಸೌಜನ್ಯಪೂರ್ಣನಡವಳಿಕೆ ಇಂದಿನ ಪೀಳಿಗೆಗೆ ಅನುಕರಣೀಯ.

*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE***

# ಸಂಸ್ಕೃತ ಸಾಹಿತ್ಯದ ಹಿರಿಮೆ

✍ **ಶೈಲಜಾ ಹೆಗಡೆ, ಮುಂಬಯಿ**

ಸಮಸ್ಯಾಪೂರ್ತಿಃ ಸಂಸ್ಕೃತ ಸಾಹಿತ್ಯದಲ್ಲಿ ಸುಭಾಷಿತಮಾಲಾ, ಕಾವ್ಯ ಶಾಸ್ತ್ರ ವಿನೋದಗಳಂತೆಯೇ 'ಸಮಸ್ಯಾಪೂರ್ತಿ' ಕೂಡ ಒಂದು ಆಕರ್ಷಕವಾದ ಕಾವ್ಯಪ್ರಕಾರ. ಪಂಡಿತರು ತಮ್ಮ ಪ್ರತಿಭಾ ಸಾಮರ್ಥ್ಯದಿಂದ; ಕೊಟ್ಟ ಸಾಲುಗಳನ್ನು ಆಧರಿಸಿ, ಶ್ಲೋಕ ಪೂರ್ಣಗೊಳಿಸುವ ವಿಶಿಷ್ಟ ವಿಧಾನವೇ ಸಮಸ್ಯಾಪೂರ್ತಿ. ಹಿಂದೆ ಉಲ್ಲೇಖಿಸಿದಂತೆ, ಪೂರ್ವಕಾಲದಲ್ಲಿ ರಾಜಮಹಾರಾಜರ ಆಸ್ಥಾನದಲ್ಲಿ ಈ ಪಾಂಡಿತ್ಯ ಪರೀಕ್ಷೆ ನಡೆಯುತ್ತಿತ್ತು. ಮೃಗಬೇಟೆ, ಧನುರ್ವಿದ್ಯೆ, ದಿಗ್ವಿಜಯ ಮೊದಲಾದ ಹವ್ಯಾಸಗಳಂತೆಯೇ ಪಾಂಡಿತ್ಯ ಪರೀಕ್ಷೆಯೂ ರಾಜರ ವೈಭವದ ಸಂಕೇತವಾಗಿತ್ತು. ರಾಜರುಗಳು ಸ್ವತಃ ಕವಿಗಳಾಗಿದ್ದು, ಸಾಹಿತ್ಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದ್ದರು. ಸಾಮೂಹಿಕ ರಂಜನೆ ಮತ್ತು ಸಾಹಿತ್ಯ ಸಂವರ್ಧನೆ ಇವೆರಡೂ ಏಕಕಾಲದಲ್ಲಿ ಫಲಿಸುತ್ತಿತ್ತು. 'ವಿದ್ಯಾಧನಂ ಸರ್ವಧನ ಪ್ರಧಾನಮ್' ಎಂಬಂತೆ ಉಳಿದ ಸಂಪತ್ತುಗಳಂತೆಯೇ ಜ್ಞಾನ ಸಂಪತ್ತಿಗೂ ಪ್ರಾಮುಖ್ಯತೆಯನ್ನು ಅವರು ನೀಡುತ್ತಿದ್ದರು. ರಾಜಾಸ್ಥಾನದಲ್ಲಿರುವ ಪಂಡಿತರ ಸಂಖ್ಯೆಯು ಆತನ ಹೆಗ್ಗಳಿಕೆಯನ್ನು ಸೂಚಿಸುತ್ತಿತ್ತು. ಬೇರೆ ಬೇರೆ ಪ್ರಾಂತಗಳಿಂದ ಪ್ರಸಿದ್ಧ ಪಂಡಿತರು ಆಗಮಿಸಿ, ತಮ್ಮ ಪಾಂಡಿತ್ಯ ಪ್ರದರ್ಶನದಿಂದ ಪಾರಿತೋಷಕಗಳನ್ನು ಪಡೆದು ರಾಜಾಶ್ರಯವನ್ನೂ ಹೊಂದುತ್ತಿದ್ದರು. ಧಾರಾನಗರಿಯನ್ನು ಆಳುತ್ತಿದ್ದ ಭೋಜರಾಜನ ಆಸ್ಥಾನದಲ್ಲಿ ನಡೆಯಿತೆನ್ನಲಾದ ಒಂದು ಕಥೆಯು ಇದಕ್ಕೆ ಪುಷ್ಟಿಯನ್ನು ನೀಡುತ್ತದೆ.

"ಮೃಗಾತ್ ಸಿಂಹಃ ಪಲಾಯತೇ" (ಜಿಂಕೆಯನ್ನು ಕಂಡು ಸಿಂಹವು ಪಲಾಯನ ಮಾಡಿತು) ಎಂಬ ಶ್ಲೋಕದ ಸಾಲು ವಿದ್ವತ್ ಸಭೆಯಲ್ಲಿ ಪಾಂಡಿತ್ಯ ಸ್ಪರ್ಧೆಗಾಗಿ ಘೋಷಿಸಲ್ಪಟ್ಟಿತು.

"ಅಸಮಾನೇ ಸಮಾನತ್ವಂ  
ಭವಿತಾ ಕಲಹೇ ಮಮ।  
ಇತಿ ಮತ್ವಾ ಧ್ರುವಂ ಮಾನೀ  
ಮೃಗಾತ್ ಸಿಂಹಃ ಪಲಾಯತೇ"

ಅಸಮಾನರಲ್ಲಿ ಹೋರಾಟವು ತರವಲ್ಲವೆಂದು ತಿಳಿದು, ಸಿಂಹವು ಜಿಂಕೆಯಿಂದ ಪಲಾಯನ ಮಾಡಿತು. ತನ್ನ ಪರಾಕ್ರಮಕ್ಕೆ ಸರಿಸಮಾನವಲ್ಲದ ಜಿಂಕೆಯೊಡನೆ ಹೋರಾಡಿದರೆ ಮಾನಗೌರವಕ್ಕೆ ಕುಂದು ಎಂದು ಭಾವಿಸಿ ಸಿಂಹವು ಪಲಾಯನ ಮಾಡಿತೆಂಬುದಾಗಿ ಮೊದಲನೆಯ ಕವಿ ಸಮಸ್ಯಾಪೂರ್ತಿಗೊಳಿಸಿದಾಗ ನೆರೆದ ಸಭಾಸದರೆಲ್ಲರೂ ಸಂತಸಭರಿತರಾದರು. ಇದೇ ಶ್ಲೋಕದ ಸಾಲನ್ನು ಎರಡನೆಯ ಕವಿ ತನ್ನ ಪಾಂಡಿತ್ಯದಿಂದ,

"ತಿಷ್ಠಾರ್ಜುನ ಅದ್ಯ ತ್ವಾಂ  
ಹನಿಷ್ಯಾಮಿ ಧ್ರುವಂ ರಣೇ ।  
ತಿಷ್ಠಾಮಿ ಕರ್ಣ ಕಿಂ ಮೂಢ  
ಮೃಗಾತ್ ಸಿಂಹಃ ಪಲಾಯತೇ"

ಎಂದು ಸಮಸ್ಯಾಪೂರ್ತಿಗೊಳಿಸಿದಾಗ, ತುಂಬಿದ ಸಭೆಯಲ್ಲಿ ಹರ್ಷಧ್ವನಿ ಮೊಳಗಿತು. ಇಲ್ಲಿ ಎರಡನೆಯ ಕವಿ ಸಮಸ್ಯಾಪೂರ್ತಿಗಾಗಿ ಮಹಾಭಾರತದ ಕಥೆಯನ್ನು ಬಳಸಿಕೊಂಡಿದ್ದಾನೆ.

ಅರ್ಜುನ! ನಿಲ್ಲು, ಇಂದು ನಿನ್ನನ್ನು ಖಂಡಿತವಾಗಿ ಯುದ್ಧದಲ್ಲಿ ಕೊಲ್ಲುತ್ತೇನೆ ಎಂದು ಮಹಾರಥಿ ಕರ್ಣ ನುಡಿದಾಗ, ಬಿಲ್ವಿದ್ಯೆಯಲ್ಲಿ ಸವ್ಯಸಾಚಿಯೆನಿಸಿದ ಅರ್ಜುನನ್ನು ಓ ಮೂರ್ಖ ಕರ್ಣಾ! ಇದೋ ನಿಲ್ಲುತ್ತಿದ್ದೇನೆ. ಎಂದಾದರೂ ಜಿಂಕೆಯಿಂದ ಹೆದರಿ ಸಿಂಹವು ಪಲಾಯನ ಮಾಡಿದ್ದುಂಟೇ? ಎಂದು ಕರ್ಣನನ್ನು ಪ್ರಶ್ನಿಸುತ್ತಾನೆ. ಒಂದೇ ಕಾವ್ಯದ ಸಾಲನ್ನು ಬಳಸಿ, ಅದನ್ನು ಮಹಾಭಾರತದ ಕಥೆಯೊಡನೆ ಮೇಳೈಸಿ, ಪ್ರಶ್ನಾರ್ಥಕ ರೂಪದಲ್ಲಿ ಶ್ಲೋಕವನ್ನು ಹೆಣೆದಿರುವ ಎರಡನೆಯ ಕವಿಯ ಪ್ರತಿಭೆಯೂ ಸೋಜಿಗವೆನಿಸುತ್ತದೆ. ಇದನ್ನೇ ಮೂರನೆಯ ಕವಿಯು,

"ಕಸ್ತೂರೀ ಜಾಯತೇ ಕಸ್ಮಾತ್  
ಕೋಹಂತಿ ಕರಿಣಾಂ ಶತಮ್ ।  
ಕಿಂ ಕುರ್ಯಾತ್ ಕಾತರೋ ಯುದ್ಧೇ  
ಮೃಗಾತ್ ಸಿಂಹಃ ಪಲಾಯತೇ ॥"

ಎಂದು ಪೂರ್ತಿಗೊಳಿಸುತ್ತಾನೆ. ಇದರಲ್ಲಿ ಮೇಲಿನ ಮೂರು ಸಾಲುಗಳಲ್ಲಿ ಪ್ರಶ್ನೆಗಳಿದ್ದು, ಕೊನೆಯ ಸಾಲು ಅವುಗಳಿಗೆ ಉತ್ತರವನ್ನು ಸೂಚಿಸುತ್ತದೆ. ಮೊದಲನೆಯ ಸಾಲಿನ ಕಸ್ತೂರಿಯು ಯಾವುದರಿಂದ ಹುಟ್ಟುತ್ತದೆ? ಎಂಬ ಪ್ರಶ್ನೆಗೆ 'ಮೃಗಾತ್' (ಮೃಗದಿಂದ) ಎನ್ನುವುದು ಉತ್ತರವಾದರೆ, ನೂರಾರು ಆನೆಗಳ ಹಿಂಡನ್ನು ಯಾರು ನಾಶಪಡಿಸುತ್ತಾರೆ? ಎನ್ನುವುದಕ್ಕೆ 'ಸಿಂಹಃ' (ಸಿಂಹವು) ಎಂಬ ಪದ ಉತ್ತರವಾಗಿ ಪರಿಣಮಿಸುತ್ತದೆ. ಹಾಗೆಯೇ ಮೂರನೆಯ ಸಾಲಿನ; ಯುದ್ಧ ಸಮಯದಲ್ಲಿ ರಣಹೇಡಿಯು ಏನು ಮಾಡುತ್ತಾನೆ? ಎಂಬ ಪ್ರಶ್ನೆಗೆ 'ಪಲಾಯತೇ' (ಓಡಿ ಹೋಗುತ್ತಾನೆ) ಎಂಬುದು ಯೋಗ್ಯ ಉತ್ತರವೆನಿಸುತ್ತದೆ. ಮೂರನೆಯ ಕವಿಯ ಈ ಕವಿತಾಚಾತುರ್ಯದಿಂದ ಆನಂದತುಂದಿಲರಾದ ಸಭಿಕರು ಕರತಾಡನ ಮಾಡಿ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ಪ್ರತಿಯೊಂದು ಪಂಡಿತರೂ ತಮ್ಮ ಪಾಂಡಿತ್ಯಕ್ಕನುಗುಣವಾಗಿ ಮಾನ ಸಮ್ಮಾನಗಳನ್ನು ಪಡೆದುಕೊಂಡರು ಎಂಬುದು ಕಥೆಯ ಸಾರವಾಗಿದೆ.

ಇದರಂತೆಯೇ ಶ್ಲೋಕಾರ್ಥವನ್ನು ಪೂರ್ಣಗೊಳಿಸುವ ವಿಧಾನವೂ ಸಮಸ್ಯಾಪೂರ್ತಿಯ ಇನ್ನೊಂದು ವೈಶಿಷ್ಟ್ಯವಾಗಿದೆ.

"ಠಠಂ ಠ ಠಂ ಠಂ ಠಠಠಂ ಠ ಠಂಠಃ" ಎಂಬ ನಾದಯುಕ್ತವಾದ ಶ್ಲೋಕದ ಪಾದವನ್ನು, ಅದರ ವೃತ್ತಕ್ಕನುಸಾರವಾಗಿ,

"ರಾಮಾಭಿಷೇಕೇ ಮದವಿಹ್ವಲಾಯಾ  
ಹಸ್ತಾತ್ ಚ್ಯುತೋ ಹೇಮಘಟಸ್ತರುಣ್ಯಾಃ।  
ಸೋಪಾನಮಾಸಾದ್ಯ ಕರೋತಿ ಶಬ್ದಂ  
ಠಠಂಠ ಠಂಠಂ ಠಠಠಂ ಠಠಂ ಠಃ ॥"

PAGE DONATED BY : **SHRI N. R. HEGDE,** DOMBIVLI

ಎಂದು ಪೂರ್ತಿಗೊಳಿಸಲಾಗಿದೆ. ಅಂದರೆ, ಪ್ರಭು ರಾಮಚಂದ್ರನ ಪಟ್ಟಾಭಿಷೇಕದ ಸಂದರ್ಭದಲ್ಲಿ ತರುಣಿಯೋರ್ವಳ ಕರದೊಳಗಿದ್ದ ಬಂಗಾರದ ಪಾತ್ರೆಯು, ಅವಳ ಹರ್ಷಾತಿರೇಕದಿಂದ ಸೋಪಾನ ಮಾರ್ಗವನ್ನು ಸೇರಿ ಬೀಳುವಾಗ ಠಠಂ ಠ ಠಂಠಂ... ಎಂಬ ಧ್ವನಿಯನ್ನು ಉಂಟು ಮಾಡಿತು ಎಂಬುದು ಇದರ ಅರ್ಥವಾಗಿದೆ. ಅಂತೆಯೇ ಇನ್ನೊಂದು ಶ್ಲೋಕದಲ್ಲಿ,

"ಕಮಲೇ ಕಮಲೋತ್ಪತ್ತಿಃ ಶ್ರೂಯತೇ ನತು ದೃಶ್ಯತೇ" ಎಂಬ ಶ್ಲೋಕದ ಮೊದಲನೆಯ ಪಾದವನ್ನು,

"ಬಾಲೇ ತವ ಮುಖಾಂಭೋಜೇ ಕಥಮಿಂದೀವರದ್ವಯಮ್" ಎಂದೂ ಪೂರ್ಣಗೊಳಿಸಲಾಗಿದೆ.

ಕಮಲದಲ್ಲಿ ಕಮಲ ಹುಟ್ಟುತ್ತದೆ ಎಂಬುದು ವದಂತಿ. ಆದರೆ ಅದನ್ನು ಎಂದೂ ಕಂಡವರಿಲ್ಲ. ಓ ತರುಣೀ! ಹೇಗೆ ನಿನ್ನ ಮುಖವೆಂಬ ಕಮಲದಲ್ಲಿ ಎರಡು ನೀಲಿಕಮಲಗಳು ಸಂಭವಿಸಲು ಸಾಧ್ಯ.

ಈ ಮೇಲಿನ ಶ್ಲೋಕಕ್ಕೆ ಸಂಬಂಧಿಸಿದ ಪ್ರಸಿದ್ಧ ಕಥೆಯೊಂದು ಜನಜನಿತವಾಗಿದೆ.

ಕವಿ ಕುಮಾರದಾಸ ಸಿಂಹಳದಲ್ಲಿ ಆಳುತ್ತಿದ್ದನು. ತನ್ನ ಕಾವ್ಯವನ್ನು ಪ್ರಶಂಸೆ ಮಾಡಿದನೆಂಬ ಕಾರಣಕ್ಕೆ ದೊರೆಯು ಕಾಳಿದಾಸನನ್ನು ತನ್ನಲ್ಲಿಗೆ ಬರಮಾಡಿಕೊಳ್ಳುತ್ತಾನೆ. ಅವರಿಬ್ಬರಿಗೂ ಒಂದೇ ಸ್ತ್ರೀಯಲ್ಲಿ ಅನುರಕ್ತಿಯುಂಟಾಗುತ್ತದೆ. ಒಂದು ದಿನ ದೊರೆಯು ತನ್ನ ಪ್ರೇಯಸಿಯ ಕಿರುಮನೆಯ ಗೋಡೆಯ ಮೇಲೆ ಒಗಟಿನ ಶ್ಲೋಕವನ್ನು ಬರೆದು ಅದನ್ನು ಬಿಡಿಸಿದವರಿಗೆ ಬಹುಮಾನ ಕೊಡುವುದಾಗಿ ಉಲ್ಲೇಖಿಸುತ್ತಾನೆ. ಸ್ವಲ್ಪ ಸಮಯದಲ್ಲಿ ಅಲ್ಲಿಗೆ ತೆರಳಿದ ಕಾಳಿದಾಸನು ಒಗಟಿಗೆ ತಕ್ಕುದಾದ ಉತ್ತರವನ್ನು ಶ್ಲೋಕರೂಪದಲ್ಲಿ ಕೆತ್ತಿರುತ್ತಾನೆ. ಬಹುಮಾನದ ಆಸೆಯಿಂದ ವೇಶ್ಯೆಯು ಕವಿ ಕಾಳಿದಾಸನನ್ನು ಕೊಲ್ಲುತ್ತಾಳೆ. ಶ್ಲೋಕವು ತಾನೇ ರಚಿಸಿದುದೆಂಬ ಅವಳ ಮಾತಿನಲ್ಲಿ ವಿಶ್ವಾಸವಿಡದ ರಾಜನು ಅವಳ ಮನೆಯ ಆವರಣದಲ್ಲಿ ಹುಡುಕಿಸಲು ಕವಿಯ ಹೂಳಲ್ಪಟ್ಟ ಶವವು ದೊರೆಯುತ್ತದೆ. ಕವಿಯ ಶರೀರಕ್ಕೆ ದಹನ ಸಂಸ್ಕಾರ ನಡೆಸಿ ಶೋಕಪರವಶನಾದ ದೊರೆಯು ಸ್ವತಃ ಚಿತಾಗ್ನಿಯಲ್ಲಿ ಶರೀರ ತ್ಯಾಗ ಮಾಡಿದನೆಂಬೀ ಕಥೆ ಸಿಂಹಳ ಪ್ರಾಂತ್ಯದಲ್ಲಿ ಪ್ರಚಾರದಲ್ಲಿದೆ.

ಹೀಗೆ ಸಮಸ್ಯಾಪೂರ್ತಿಯೆಂಬ ಶ್ಲೋಕ ಪ್ರಕಾರವು ಅತ್ಯಂತ ಚಮತ್ಕಾರಿಕವಾಗಿದ್ದು, ಕವಿಯ ಕಲ್ಪನಾ ಸಾಮ್ರಾಜ್ಯವನ್ನು ವಿಸ್ತಾರ ಗೊಳಿಸುತ್ತದೆ. ಜ್ಞಾನ ಭಂಡಾರವನ್ನು ಅಭಿವೃದ್ಧಿಪಡಿಸುವಲ್ಲಿ ಮುಖ್ಯವಾದ ಸಾಧನವೆಂದೂ ಪರಿಗಣಿಸಲ್ಪಡುತ್ತದೆ. ಇಂದೂ ವಿದ್ವತ್ ಸಭೆಗಳಲ್ಲಿ 'ಸಮಸ್ಯಾಪೂರ್ತಿ' ತನ್ನದೇ ಆದ ವೈಶಿಷ್ಟ್ಯವನ್ನು ಮೆರೆದಿದೆ.

"ಜ್ಞಾನಂ ಲಭ್ಯಂ ಪ್ರಯತ್ನತಃ
ವಿದ್ವಾನ್ ಸರ್ವತ್ರ ಪೂಜ್ಯಂತೇ"

ಎಂಬ ಸುಭಾಷಿತಕಾರನ ವಾಣಿ ಯಥಾರ್ಥವಾಗಿದೆ, ಸಾರ್ವಕಾಲಿಕವಾಗಿದೆ.

*(ಮುಂದುವರಿಯುವುದು)*

# ಬಯಲು

**– ಜಿ. ಪಿ. ಕುಸುಮ, ಮುಂಬೈ**

ನನ್ನ ಮನೆಯೆದುರು ಯಾರೇನೂ
ಕಟ್ಟದೆ ಕೆಡವದೆ ಬಿಟ್ಟ ಬಯಲು ಜಾಗ
ನಸುಕಿನಲಿ ಬಯಲಿಡೀ
ನಗುವಿನ ತೆರೆಯಲಿ ಮಿಂದು ಮಿಂಚುವ
ನೂರಾರು ಸಂಖ್ಯೆಯ ಜನರು
ನಗುವ ಸದ್ದು ಹಬ್ಬುವುದು ನಿತ್ಯ.

ನಗುವುದು ವ್ಯಾಯಾಮವೆಂದು
ಬಯಲಲ್ಲಿ ನಗುತ್ತಾರೆ, ನಗುವಂತೆ ಕಾಣುತ್ತಾರೆ.
ಮಳೆಯಲ್ಲಿ, ನದಿಯಲ್ಲಿ ನೀರಾಗಿ ಹರಿಯದವರೂ
ಕತೆಯಲ್ಲಿ, ಕನಸಲ್ಲಿ ಮನಸಲಿ
ಮೂಡದವರೂ
ನಿತ್ಯ ಮುಖ ಗಂಟಿಕ್ಕುವವರೂ
ಅಧಿಕಾರ, ಅಂತಸ್ತು, ಪ್ರಚಾರದ ಕೈಗೊಸಾದವರೂ
ನಗದೇ ಇರುವವರೂ
ಮರುಭೂಮಿಯ ಹಾಗೆ ನಿಂತು ಬಿಡುವವರೂ
ಬಯಲಲ್ಲಿ ನಗುತ್ತಾರೆ, ನಗುವಂತೆ ಕಾಣುತ್ತಾರೆ.

ಹಗಲಿನ ವೇಷಕ್ಕೆ ಸಿದ್ಧರಾಗಲು
ನಗುವಿನ ಬಣ್ಣವನ್ನೊಂದಿಷ್ಟು ಬಳಿಯಲು
ಅಣಿಯಾಗುತ್ತಾರೆ ಮರೆತು
ಮನಸ್ಸು ಶಿಶುವಾಗಬೇಕು ನಗುವಾಗ ★


## ANNUAL SATYANARAYAN POOJA

**ANNUAL SATYANARAYAN POOJA**
**Dombivli**
will be held **on Sunday 19th June 2016**

***Venue :***
**Rotary Club of Dombivli,**
Raghuveer Nagar,
Opp. Madhav Ashram Hall,
Manpada Road, Dombivli (E) - 421 201.

*All are cordially invited.*

# Dark Energy and Dark Matter

✍ **L. V. Shastri, Bangalore**

Owing to the stupendous reach that has come within the grasp of Science and Technology, one may be excused for thinking that now there is very good knowledge about almost everything there is to know. This is because now there is the realization of existence, that too on a vast scale, of entities that are being called 'Dark Energy and Dark Matter'. Modern science has every compulsion to invoke them with regard to both the microcosm of subatomic world and the macrocosm of astronomical world of stars, planets, galaxies--- and indeed the past and the future of the universe as a whole! It is estimated that the known forms of energy and matter in the observable universe make up just about 5%, the rest being 'Dark' (about 70% as energy and about 25% as matter).

It is noteworthy that the word 'dark' is used, by the physical science of the day for want of vocabulary for the description. The entities have not been amenable to the most sophisticated instruments to date. It is even surmised that they may never be accessible at all! That they exist and are constantly playing out throughout the known universe is arrived at indirectly. The subject matter is in the realm of the frontier areas of physics, however, and can be deliberated upon only by the specialists.

Are there some pointers and lessons to be learnt for our own day to day living - our very belief system in particular - in the above scientific development? It would appear that the answer can only be in the affirmative. Because the present position about dark energy and dark matter is very much akin to our disposition regarding the nature of God! Mankind for long has been obsessed about knowing the nature of GOD, the almighty. We have many schools of thought and religions, founded from time to time by enlightened souls, no doubt. Each of them is equally respectable and profound. For an ordinary mortal, however, it is somewhat like presenting a kaleidoscopic view, God being seen differently at different angles of viewing! Saying this is by no means meant to belittle any religion, however. The most comfortable view seems to be the one that is based on one's Faith.

Lord Buddha might have willed to save humanity from all the confusion and conflict, and the futility thereof, regarding knowing the nature of God. In Buddhism, religion means just being good human being! (I hope I am not wrong). However, there have been profound and expansive intellectual exercises about knowing the very cause of creation and nature of the creator especially in Vedanta / Hindu philosophy.

In Vedic thoughts, highlighted / summarized in the Upanishads, the creator is given the name Brahma / Brahman that is spread throughout the length and breadth of creation. In other words, creator is part of creation, cause and effect thus merging together. There is also a school of thought (Shaktism) that says that all that is in the creation is but different forms assumed by Shakti, Energy. We have to recall that mass and energy are inter-convertible, as proposed by Einstein. We have the example, right in our midst, of creation and harnessing of nuclear energy where mass gets converted to energy in a nuclear reactor. As we know, energy from the Sun itself is nothing but nuclear energy. In Hindu philosophy, Brahma is both Saguna, having manifest form and qualities and Nirguna, the opposite with unmenifest form and qualities, simultaneously.

For our simplistic understanding, nuclear and various other accessible forms of energy as also matter can be viewed as representing the Saguna form. Dark energy and dark matter can be regarded as the Nirguna form of Brahma, since their attributes have remained just unknown! We just replace the word 'Nirguna' of philosophy by the word 'Dark' of science! This brings modern science right in line with the Vedanta thoughts propounded eons ago!

Coming to the aspect of worshipping God, it is rather unfortunate that we stand totally divided about the form for the worship. Many sects have arisen, in many religions including the Hindu, insisting on one or the other form or even no form. We also are witness to bitterness among the people owing allegiance to one or the other sect. Shri Ramakrishna Paramahans endorsed worshiping God in any form of one's choice, based on the Saguna aspect of Brahman.

As we know, there have been other schools of thought regarding God and creation in different parts of the world in the centuries gone by and new religions have arisen from time to time. In any case, it is but natural that mankind as a whole got distributed among the various religions and belief systems and blissfully too. For, without the anchor of religion, it would have been totally the existence of a beast. The present day maniacal fights and ghastly actions, all in the name of religion, are, hopefully, only temporary aberration that has to end for the very survival of humanity.

Indeed, the present discovery of the major and predominant presence of dark energy and dark matter throughout our universe has the potential to give birth to one universal religion binding all mankind in Future! That sounds great!! OM!

# ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬೈ

# HAVYAKA WELFARE TRUST, MUMBAI

## 'ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ' ಪ್ರಶಸ್ತಿ ಪ್ರದಾನ ಸಮಾರಂಭ – 2016

## "Karki Venkataramana Shastri Suri" Award Presentation Ceremony - 2016

**DATE : 26-6-2016 TIME : 10.00 A.M. onwards**

**Venue : Havyakara Sabhagraha,** Dipti Solitaire, 4th Floor, M. G. Road & L.B.S. Marg Junction, Opp. Post Office, Ghatkopar (W), Mumbai - 400 086.

ಸಹಕಾರ / **Co-operation** — ಕರ್ನಾಟಕ ಮಲ್ಲ, ಕನ್ನಡ ದೈನಿಕ, ಮುಂಬೈ
**Karnataka Malla, Kannada Daily News Paper, Mumbai**

ಪ್ರಶಸ್ತಿ ಪಾತ್ರರು / **Awardee** — ಡಾ। ವ್ಯಾಸರಾವ್ ನಿಂಜೂರ್ (ಖ್ಯಾತ ಸಾಹಿತಿ)
**Dr. VYASARAO NINJOOR** (Eminent Writer)

ಮುಖ್ಯ ಅತಿಥಿಗಳು / **Chief Guest** — ಶ್ರೀ ವಿಷ್ಣು ಭಟ್ಟ ಪಾದೇಕಲ್ (ಕನ್ನಡ ಸಂಸ್ಕೃತ ವಿದ್ವಾಂಸರು, ಸಂಶೋಧಕರು)
**Shri VISHNU BHAT PADEKAL** (Kannada Sanskrut research Scholar)

ಗೌರವ ಅತಿಥಿಗಳು / **Guests of Honour** — ಶ್ರೀ ಚಂದ್ರಶೇಖರ ಪಾಲೆತ್ತಾಡಿ (ಸಂಪಾದಕರು, ಕರ್ನಾಟಕ ಮಲ್ಲ)
**Shri CHANDRASHEKHAR PALETTADI** (Editor, Karnataka Malla)
ಶ್ರೀ ಶಿಮುಂಜೆ ಪರಾರಿ (ಸಾಹಿತಿ, ನಾಟಕಕಾರರು)
**Shri SHIMUNJE PARARI** (Eminent Writer, Dramatist)
ಶ್ರೀ ಭರತ್‌ಕುಮಾರ ಪೊಲಿಪು (ರಂಗತಜ್ಞ)
**Shri BHARATKUMAR POLIPU** (Drama Artist)

ಅಧ್ಯಕ್ಷತೆ / **Chairperson** — ಶ್ರೀ ಶಿವಕುಮಾರ್ ಭಾಗವತ್ (ಅಧ್ಯಕ್ಷರು ಹವ್ಯಕ ವೆಲ್ಫೇರ್ ಟ್ರಸ್ಟ್)
**Shri SHIVKUMAR BHAGWAT** (President Havyaka Welfare Tust)

### ಕಾರ್ಯಕ್ರಮಗಳ ವಿವರ / Programme Details

ಪ್ರಶಸ್ತಿ ಪ್ರದಾನ ಸಮಾರಂಭ ಬೆಳಿಗ್ಗೆ 10.00 ರಿಂದ 12.00 / Award presentation : 10.00 a.m. to 12.00 Noon

ಕನ್ನಡ ಜಾನಪದ ಗೀತೆಗಳ ಸ್ಪರ್ಧೆ (ಮುಂಬೈ ಕನ್ನಡಿಗರಿಗಾಗಿ) / Kannada Folk Songs Competition /
ಮಧ್ಯಾಹ್ನ 12.00 ರಿಂದ 1.30 ರವರೆಗೆ 12 noon to 1.30 p.m.

ಭೋಜನ ವಿರಾಮ : 1.30 ರಿಂದ 2.30 / Lunch Break : 1.30 p.m. to 2.30 p.m.

'ಕಿಶೋರಿ ಯಕ್ಷ ರೂಪಕ' / Kishori Yaksha Roopaka
ಕುಮಾರಿ ತುಳಸಿ ಬೆಟಕೊಪ್ಪ ಇವರಿಂದ : 3.00 ರಿಂದ 4.00 / by Kumari Tulsi Betkoppa : 3.00 to 4.00 p.m.

*ತಾವೆಲ್ಲರೂ ಬಂಧು-ಮಿತ್ರರೊಂದಿಗೆ ಆಗಮಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.*

| | | |
|---|---|---|
| ಶಿವಕುಮಾರ ಭಾಗ್ವತ್ (ಅಧ್ಯಕ್ಷರು) | ಎನ್. ಆರ್. ಅಕದಾಸ (ಗೌ। ಕಾರ್ಯದರ್ಶಿ) | ತನುಜಾ ಹೆಗಡೆ, ಕೇಶವ ಹೆಗಡೆ (ಸಂಚಾಲಕರು, ಕೆ.ವಿ.ಎಸ್.ಎಸ್.) |

ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ

# SATYAMEVA JAYATE

✍ **Rati Hegde**

Hare Raama. SATYAMEVA JAYATE - Our National Motto taken from the Mundaka Upanishad. How many times we have heard these words and wondered if it is really true? Especially in the face of blatant untruths, blackmails, oppression and delayed justice. But **a landmark judgment passed by Hon. Judge Shri Mudi Goudar in the case put against our Param Pujya Guruji, Gokarna Mandaladeeshwara Jagatguru Shankaracharya Shree Shree Raghaveshwara Bharati Mahaswamiji, forces us to believe in Satyameva Jayate - Truth Alone Triumphs!**

The widespread love for our Guruji brought about its own share of envy from many others, who wanted to topple Him from His Peetha and wanted to tarnish His name. But the Grace of Shree Chandramoulishwara, Shree Sita Rama Parivaara and all His Kararchita Devarus, protected P.P. Guruji many a times from being affected by these envious people. It is a proof of His Divine Being that every time He has been successful in thwarting the unholy attempts of these enemies of Sanatana Dharma, and has come out shining. Their latest attempt was so low in nature that they tried to level accusations of Him having caused harm, physically, mentally and spiritually to a married woman. While all of us Shishyas knew definitely that it was a false accusation, we had to wait for the law of the land to pass a judgment to that effect. AND IT HAPPENED!

On the 31st of March 2016, the Hon. Judge discharged P. P. Guruji from all accusations in such a strong manner that he demolished in detail all the False Accusations leveled on Guruji and the case was discharged.

But what was Guruji's reaction to all this? He was His same, smiling, calm self. He neither showed any excitement, nor did He show any anger to the complainant. In fact, throughout the duration of the case, He never once spoke badly about the woman in question or her husband or family. He always only felt sorry for them that they had to indulge in such acts (which normally causes downfall to one's name and position in society). He has never spewed vengeance or shown anger towards them. He always had an air of forgiveness about Him. **Our Havyaka Samaja is truly blessed to have Him as our Pontiff - a Guru who can teach us how to lead our lives.** There are some lessons that all of us can take from this :

**STHITHPRAGYATHA :** Every true Sanyasi knows this. It is the state of remaining in the same state irrespective of whether one is going through good times or bad. Most of us feel too happy and become egotistical when something good happens to us, and we feel sad and depressed when things are not going in our favour. ShreeKrishna in His Gita, advised us to become Sthithapragya; **Guruji showed us that it can be done. A great lesson for all of us and who better than Guruji to teach us this.**

**FORGIVENESS :** Even with the worst of accusations hurled at Him, Guruji always favoured forgiving His enemies. **'To err is human, to forgive Divine.'**

**FACING SUFFERING WITH A SMILE :** According to Master Sheng Yen, **"Those who help alleviate sufferings are Boddhisattvas; those in the throes of Suffering are Great Boddhisattvas." Our Guruji definitely falls in both categories…** He helps others, who are suffering, through His blessings; almost all of us have been touched and helped by His blessings. And He has been subject to many sufferings because of the actions of His enemies and also His devotees (He does not think so). But He has borne all with a smile, as all of His devotees will heartily agree with.

**FULFILLING ONE'S DUTIES :** The Mahabharata says that fulfilling one's duties is a priority; it is important for both, the individual and the society. There was never a day when Guruji did not work towards His Dharmic work of upholding the traditions and rituals of Sanatana Dharma or His duties towards His devotees, as a Guru. **In the most testing of times too, He never skipped His Puja or Anushthana.** Whatever the tension, we too must fulfill our duties as a householder, an employee, a boss, whatever - first and foremost.

**DISCIPLINE :** Guruji has practiced utmost discipline, in His words, actions and deeds. Never has He spoken rudely, or badly, about any of His tormentors. Never has He instigated anybody against those who worked against Him. In fact even when His disciples wanted to celebrate the discharge of the case, His words were "Sambramadalli Sannyam irali" … let there be discipline in the celebrations. Vulgar displays of celebrations or enmity, both cause our downfall and hence **maintaining discipline in our thoughts, speech and deeds is the best lesson we can learn from Guruji.**

Let us all join hands in thanking God that the eclipse which wanted to darken Guruji's and ShreeMatha's Peetha's luminous existence, itself got eclipsed. Jai Shree Ram! Vande GouMatharam!

# CHANGE OF ADDRESS

| No. | Name & Address |
|---|---|
| L.M. - 278 | Banari Ganaraj<br>D - 2/85 - 11, Nisarga Naithady,<br>Kamminje, P. O. : Mottedka, Puttur, D. K. - 574 202 |
| L.M. - 511 | Bhat M. N.<br>'Soma Prabha', 9-4-561-102,<br>Near Goutam Garden, Gayatri Nagar, 5th Cross,<br>Kurse Compound, Sirsi U. K. Karnatka - 581 401. |
| L.M. - 1349 | Bhat Mahesh Satyanarayan<br>D - 102, Peninsula Park,<br>Near Viva College, Virar (W) - 401 303. |
| P. T. 109 | Bhat Shripad S.<br>A/20, Nalanda, BARC Colony,<br>Anushakti Nagar, Mumbai - 400 094. |
| L.M. - 804 | Dhareshwar M. S.<br>C-201, Pooja CHS., Bd. BMC School,<br>IIT, Powai Main Gate, Powai - 400 076. |
| L.M. - 1390<br>L. M. - 1391 | Hegde Satish V.<br>Hegde Bharati Satish<br>203, Samruddhi Apt.,<br>Sector 2 - 3, 'Indra Dhanush',<br>Jui Nagar, Navi Mumbai - 400 706. |
| L. M. - 957 | Hegde G. J.<br>Kaveri Ayyappa Nagar,<br>Sirsi, N. K. Karnataka - 581 401. |
| L. M. - 621 | Hegde S. S.<br>H. 16, 10th Cross, 6th Main,<br>RBI Layout, J. P. Nagar,<br>7th Phase, Bangalore - 78. |
| L. M. - 1318 | Hegde Sachin Balachandra<br>2 - D, 606, Dheeraj Upavan,<br>Opp. Gayatri Mandir, Siddarth Nagar,<br>Borivali (E), Mumbai - 400 066. |
| L. M. - 1479 | Hegde Santosh Ganpati<br>B - 2 - 104, Sai Paradise New SBI,<br>Khadakpada, Kalyan (W) - 421 301. |
| P. T. - 60 | Hegde Shridhar Devaru<br>304, Shah Niwas CHS.,<br>Near Datta Mandir, Vivek College Road,<br>Siddarth Nagar, Goregaon (W),<br>Mumbai - 400 062. |
| L. M. - 1435 | Joshi Arvind S.<br>A/3, 1006, CASA Imperia,<br>S. No. 59+62, Jamadade Vasti,<br>Wakad, Pune - 411 057. |
| L. M. - 199 | Kameshwar N. N.<br>201 - 202, Anant Nathe Bldg.,<br>Parajape - 'B' Scheme, Road - 3,<br>Vile Parle (E), Mumbai - 400 057. |
| L. M. - 900 | Kanak A. S.<br>Flat - 104, 'A' Block, Krishna Prakash Apt.,<br>Bd. Advait Petrol Pump, 16th Main, Ist Stage,<br>BTM Layout, Bangalore - 68. |

| No. | Name & Address |
|---|---|
| L. M. - 227 | Pavanaja U. B.<br>S-21, 'Hansa', 18th Main Road,<br>Bhavat Nagar - III Stage, P. O. Vishwaneedam,<br>Bangalore - 91 |
| L. M. - 1403<br>L. M. - 1404 | Upadhya Gautam Venkatesh<br>Upadhya Chetana Gautam<br>E - 302, Sai Charan Res., Ramdev Park,<br>Cross Road, Mira Road, Thane - 401 107. |
| L. M. - 604 | Shastri C.M.N.<br>Bhavani Estate, Valnoor Post, Thyagthur Village,<br>Kodagu Dist., Karnataka - 571 234. |
| L. M. - 802 | Hegde Kumar K.<br>Asmita Jyoti CHS., Ltd., 6/1, F/N 66,<br>6th Floor, Near Atharva College, Charkop Naka,<br>Marve Road, Malad (W), Mumbai - 400 095. |
| L. M. - 1323 | Bhat Narayan G.<br>Shree Laxmi Narayan Niwas,<br>II Cross Manjunath Pura, P.O. Saraswatapur,<br>Dharwad, Karnataka - 580 002. |
| L. M. - 1310 | Bhagwat Anil T.<br>B - 1205, Balaji Angan,<br>Bd. Vijay Sales Neelkath Dham,<br>Old Mumbai - Pune Highway, Panvel - 410 206. |
| L. M. - 582 | Bhat Ramachandra<br>115 / 100, 'B' Main Road, 6th Block,<br>Rajaji Nagar, Bangaluru - 560 010. |
| L. M. - 352 | Bhat Ramesh G.<br>116, Royal Manor, Royal Enclave,<br>Shriram Pura, Jakkur Post, Bangaluru - 560 064. |
| L. M. - 165 | Gore Ghanashyam V.<br>1451, III Cross, I Stage, II Phase,<br>Chandra Layout, Bangaluru - 560 040 |
| L. M. - 774 | Hegde Shanti (Dr)<br>C/o. R. V. Hegde, Parthiveshwar Nilaya<br>Misgar Plot, Sirsi, N. K.,Karnataka - 581 401. |
| L.M. - 1190 | Bhat Radha N.<br>B - 604, Narayan Heritage, Kandarpada,<br>Dahisar (E), Mumbai - 400 068 |
| L.M. - 1401 | Bhat Roopa Vinod,<br>A - 1203, Ekta Tarrace, Manavir Nagar,<br>Kandivali (W) - 400 067 |
| L. M. - 1389 | Hegde Nitin Ramesh<br>R. No. 6, Somnath Sadan, Near Namdevi Cable,<br>Nandivli Road, Dombivali (E), Thane - 421 201 |
| L. M. - 024 | Bhat R. L.<br>502, Laxmi Vision CHS., II Gate, Vijaya Park,<br>Mira Road (E) - 401 107 |
| L. M. - 106 | Bhat G. R.<br>C/o. K. G. Bhat, Professor Colony,<br>Prabhat Nagar, Honnavar, UK Karnataka - 581 334. |
| P. T. - 063 | Karki D. P.<br>Prabhat Nagar, Honnavar, U. K. Karnataka - 581 334. |

# ಎತ್ತಿದ ಕೈ

✍ ಅಮಿತಾ ಎಸ್. ಭಾಗವತ್

ಎತ್ತರ ಎತ್ತರವಾಗಿ ಬೆಳೆದ ಮರಗಳು. ಕೆಳಗೆ ಮುಳ್ಳು ಕಲ್ಲುಗಳು. ಎಲ್ಲೋ ಆನೆ ಘೀಳಿಡುವ ಶಬ್ದ. ರೊಂಯ್ ಎಂದು ಗಾಳಿ ಬೀಸುವ ಸದ್ದು. ನಾನು ಓಡುತ್ತಿದ್ದೇನೆ. ಮತ್ತೆ ನನ್ನ ಹಿಂದೆ ಅದೇ ಎತ್ತರದ, ಧಡೂತಿ ಮನುಷ್ಯ. ಕೋರೆ ಹಲ್ಲುಗಳಿವೆ. ಅವನ ಕೈ ಮಾತ್ರ ತುಂಬಾ ಉದ್ದ. ಆ ಕೈಯಲ್ಲಿ ಭಾರವಾದ ದೊಣ್ಣೆಯಿದೆ. ಅವನು ನನಗೆ ಹೊಡೆಯಲು ಕೈ ಎತ್ತಿದ್ದಾನೆ. ಏಟು ಇನ್ನೇನು ಬೀಳುತ್ತಾ ಉಂಟೂ ಇನ್ನೂ ಬಿದ್ದಿಲ್ಲ. "ಅಮ್ಮಾ...". ಧಗ್ಗನೆ ಎದ್ದು ಕುಳಿತುಕೊಂಡೆ, ಪುನಃ ಅದೇ ಕನಸು. ಬಹುಶಃ ನಾನು ಜೋರಾಗಿಯೇ ಕೂಗಿರಬೇಕು. ಇನ್ನೊಂದು ಚಾದರವನ್ನು ಮೈ ಮೇಲೆ ಎಳೆದುಕೊಂಡು ಸಕ್ಕರೆಯ ನಿದ್ದೆಯಲ್ಲಿದ್ದ ರಾಜೇಶ ಎದ್ದು ಕುಳಿತಿದ್ದ. "ಯಾವಾಗಲೂ ತಪ್ಪಿದ್ದಲ್ಲ" ಅಂತೇನೊ ಅವನಂದಂತಾಯಿತು.

ಪಕ್ಕದಲ್ಲಿ ಮಲಗಿದ ಎರಡು ವರ್ಷದ ಮಗ ಅಂಕಿತ ಆಗಲೇ ಕುಸುಕುಸು ಶುರು ಮಾಡಿದ್ದ. ಅವನನ್ನು ತಟ್ಟಿ ಮಲಗಿಸುತ್ತಲೇ ಪಕ್ಕಕ್ಕೆ ವಾಲಿ ರಾಜೇಶನತ್ತ ತಿರುಗಿದೆ. ರಾಜೇಶ ಕುಳಿತೇ ಇದ್ದ. ಆ ಛಳಿಯಲ್ಲೂ ಸಣ್ಣಗೆ ಬೆವರುತ್ತಿದ್ದೆ. ಮದುವೆಯಾದ ಹೊಸತರಲ್ಲಾಗಿದ್ದರೆ ಅವನು ತನ್ನ ಬಾಹುಗಳಲ್ಲೆಳೆದುಕೊಂಡು ಸಮಾಧಾನ ಮಾಡುತ್ತಿದ್ದ. "ಯಾಕೆ ಹೆದರಿಕೆ ನಾನಿದ್ದೇನಲ್ಲ?". ಈಗ ಸಿಹಿ ನಿದ್ದೆಯಿಂದ ಎಳಿಸುವ ನನ್ನ ಕನಸ್ಸಿನ ಬಗ್ಗೆ ಅವನ ಅಸಹನೆ ತುಂಬಾನೇ ಹೆಚ್ಚಾಗಿರಬೇಕು. ಇನ್ನು ಬಹುಶಃ ಆಫೀಸಿಗೆ ಹೊರಡುವವರೆಗೂ ಅವನು ಮಾತನಾಡಲಿಕ್ಕಿಲ್ಲ.

ಅಂಕಿತನಾಗಲೇ ನಿದ್ದೆ ಹೋಗಿದ್ದ. ಪಕ್ಕದಲ್ಲಿರುವ ಮೊಬೈಲಲ್ಲಿ ಸಮಯ ನೋಡಿದಾಗ ಇನ್ನೂ ಬೆಳಗಿನ 4.30. ರಾಜೇಶ ಮೌನವಾಗಿಯೇ ಎದ್ದು ಬಾತ್‌ರೂಮಿನತ್ತ ನಡೆದ. ಇನ್ನು ಒಂದು ಕಪ್ ಚಹಾ ಮಾಡಿಕೊಂಡು ಲ್ಯಾಪ್‌ಟಾಪ್‌ನ ಎದುರು ಕುಳಿತುಕೊಳ್ಳಬಹುದು. "ಉಹೂಂ, ನಾನೂ ಮಾತನಾಡುವುದಿಲ್ಲ. ಈ ಕನಸು ಬೀಳುವುದರಲ್ಲಿ ನನ್ನದೇನು ತಪ್ಪಿದೆ?".

ರಾಜೇಶ ಎದ್ದಿದ್ದನ್ನು ನೋಡಿ ಇನ್ನೂ ಮಲಗಲು ಮನಸ್ಸಾಗಲಿಲ್ಲ. ಅಡುಗೆ ಮನೆಯತ್ತ ಹೋಗುತ್ತಿದ್ದ ರಾಜೇಶನಿಗೆ ಹೇಳಿದೆ. "ಏ, ನನಗೂ ಒಂದು ಕಪ್ ಚಹಾ ಮಾಡೊ" ಮಾತನಾಡದೇ ಒಳ ಸರಿದ. ಆದರೆ ಮುಖ ತೊಳೆದು ಬರುವಷ್ಟರಲ್ಲಿ ನನಗೂ ಒಂದು ಕಪ್ ಚಹಾ ಇಟ್ಟಿದ್ದ. ಬಿಸ್ಕಿಟ್ ಡಬ್ಬಾದಿಂದ ಒಂದು ಮಾರಿ ಬಿಸ್ಕಿಟನ್ನು ತೆಗೆದುಕೊಂಡೆ.

ಎಣ್ಣೆ ಕಮ್ಮಿ ಹಾಕಿ ನಮ್ಮಿಬ್ಬರಿಗಾಗಿ ಪಲ್ಯ ಮಾಡಿ ರೊಟ್ಟಿ ಲಟ್ಟಿಸಿದೆ. ಅಂಕಿತನಿಗೆ ಬೇಬಿ ಸಿಟ್ಟಿಂಗ್‌ನಲ್ಲಿ ಬಿಟ್ಟು ಹೋಗುವಾಗ ಕೊಡಲೆಂದು ಡಬ್ಬಾದಲ್ಲಿ ನಿನ್ನೆ ಮಾಡಿಟ್ಟ ನಾನ್‌ಕಟಾಯ್ ಹಾಕಿದೆ. ಮತ್ತೆ ಒಂದು ಗ್ಯಾಸ್ ಒಲೆಯಲ್ಲಿ ಬ್ರೆಡ್ಡನ್ನು ಬಿಸಿ ಮಾಡಲು ಇಟ್ಟು ಆಮ್ಲೆಟನ್ನು ಮಗುಚಿ ಹಾಕಿದೆ. ಎಲ್ಲಾ ರೆಡಿ ಮಾಡಿ ಇಟ್ಟು ರಾಜೇಶನನ್ನು ನಾಷ್ಟಾಕ್ಕೆ ಕರೆದೆ. ಆಮ್ಲೆಟನ್ನು ಮಡಚಿ ಎರಡು ಬ್ರೆಡ್‌ಗಳ ನಡುವೆ ಇಡುತ್ತಾ ರಾಜೇಶ ನುಡಿದ "ನೀನು ತಕೊ, ಮತ್ತೆ ಹೊತ್ತಾಯಿತು ಅಂತ ತಿನ್ನದೆಯೇ ಓಡುತ್ತೀಯಾ". ಅವನ ಸಿಟ್ಟು ಕರಗಿತು ಅಂತ ಅನಿಸುತ್ತಿದ್ದಂತೆಯೇ ಕನಸಿನ ಭಾರದಿಂದ ಭಾರವಾದ ತಲೆಯೂ ಹಗುರಾದಂತೆನಿಸಿ ನಸುನಕ್ಕೆ. ಆದರೆ ರಾಜೇಶ ಮಾತ್ರ ಮುಖದಲ್ಲಿ ನಗುವನ್ನು ಅಡಗಿಸಿಕೊಂಡಂತನಿಸುತಿತ್ತು.

ದಿನಾ ಏಳುವ ಸಮಯವಾದರೂ ಏಳದಿದ್ದ ಅಂಕಿತನನ್ನು ಎಬ್ಬಿಸಲು ಬೇಜಾರಾದರೂ ಎಬ್ಬಿಸಿದೆ. ಅವನಿಗೆ ಹಾಲನ್ನು ಕುಡಿಸಿ ತಯಾರು ಮಾಡುವಷ್ಟರಲ್ಲಿಯೇ ಫೋನ್ ರಿಂಗಾಯಿತು. ಮೊಬೈಲಲ್ಲಿ ಮಾಡದೆ ಲ್ಯಾಂಡ್ ಲೈನಿಗೆ ಯಾರು ಮಾಡಿದರಪ್ಪಾ ಎಂದುಕೊಳ್ಳುತ್ತಲೇ ಫೋನ ಎತ್ತಿದೆ.

"ಪ್ರಭಾ..." ಎಂದು ನಸು ಕಂಪಿಸುತ್ತ ಹೇಳಿದ ಧ್ವನಿ ಜಾನಕಿಯದಾಗಿತ್ತು.

"ಪ್ರಭಾ, ನಿನ್ನೆ ರಾತ್ರಿ ನಿಮ್ಮಪ್ಪ ಆಫೀಸಿನಿಂದ ಬರುವಾಗ ಮನೆಯ ಬಳಿಯಲ್ಲಿ ರಿಕ್ಷಾದಿಂದ ಇಳಿಯುವಾಗ ಬದಿಯಲ್ಲಿಯೇ ಒಂದು ಸ್ಕೂಟರ್ ಬಂದು ಹೊಡೆಯಿತು. ಕೆಳಗೆ ಬಿದ್ದು ಪಕ್ಕದ ಕಲ್ಲಿಗೆ ತಲೆ ಹೊಡೆದುಕೊಂಡ ನಿನ್ನ ಅಪ್ಪನ ರಕ್ತಸ್ರಾವ ನಿಲ್ಲುತ್ತಲೇ ಇರಲಿಲ್ಲ. ಸೂಪರ್ ಸ್ಪೆಷಾಲಿಟಿ 'ಧನ್ವಂತರಿ' ಹಾಸ್ಪಿಟಲ್‌ಗೆ ಸೇರಿಸಿದೆವು. ಈಗ ಆಪರೇಶನ್ ಮಾಡುತ್ತಾರಂತೆ. ತಲೆಯಲ್ಲಿ ಕ್ಲಾಟ್ ಆಗಿದೆ ಎಂದು ಡಾಕ್ಟರು ಹೇಳುತ್ತಿದ್ದಾರೆ. ನೀನು ಬಂದು ಬಿಡು. ಈಗಲೇ ಹೊರಟುಬಿಡು. ಹಾಂ ಮತ್ತೆ ಅಂಕಿತನನ್ನು ಹಾಸ್ಪಿಟಲ್‌ಗೆ ಕರೆದುಕೊಂಡು ಬರಬೇಡ" ಜಾನಕಿ ಇನ್ನೂ ಏನೋ ಹೇಳುತ್ತಿದ್ದಳೋ ಏನೋ ಮನೆಯ ಕೆಳಗೆ ಶಾಲೆಗೆ ಮಕ್ಕಳನ್ನು ಕರೆದುಕೊಂಡು ಹೋಗಲು ಬಂದ ಬಸ್ಸಿನ ಹಾರ್ನ್ ಶಬ್ದ ಜೋರಾಗಿ ಕೊನೆಯ ವಾಕ್ಯ ನನಗೆ ಕೇಳುತ್ತಿರಲಿಲ್ಲ. ಆದರೂ "ಬರ್ತೇನೆ ಚಿಕ್ಕಮ್ಮಾ" ಎಂದೆ. ನನ್ನ ಕಾಲಿನ ಶಕ್ತಿಯೆಲ್ಲಾ ಉಡುಗಿ ಹೋಗಿತ್ತು. ಕಾಲಿಗೆ ಬಂದು ತೊಡರುತ್ತಿದ್ದ ಅಂಕಿತನನ್ನು ಗಟ್ಟಿಯಾಗಿ ಅವುಚಿಕೊಂಡು ಸೋಫಾದ ಮೇಲೆ ಕುಸಿದೆ.

"ಏನಾಯಿತು?" ಎಂದು ಕೇಳುತ್ತಾ ಬಂದ ರಾಜೇಶನಿಗೆ ವಿವರಿಸಿದೆ. "ನಾನೂ ಕೆಲಸಕ್ಕೆ ಹೋಗೋದಿಲ್ಲ. ನಾವಿಬ್ಬರೂ ಒಟ್ಟಿಗೆ ಹೋಗೋಣ" ಎಂದ.

ಮನಸ್ಸಿನಲ್ಲಿ ನಿರ್ವಾತ ಪರಿಸರ ಉಂಟಾಗಿತ್ತು. ಆದರೂ ಕಾಲುಗಳು ಬೆಡ್ ರೂಮಿನತ್ತ ಚಲಿಸಿದವು. ಅಪ್ಪನು ಹಿಂದೆಂದೋ ತೆಗೆಸಿಕೊಟ್ಟ ತಿಳಿ ಹಳದಿ ಬಣ್ಣದ ಸೆಲ್ವಾರ್ ಕಮೀಜ್ ಹಾಕಿಕೊಂಡೆ. ಯಾವಾಗಲೂ ಟಿಫಿನ್ ತೆಗೆದುಕೊಂಡು ಹೋಗುವುದೆಂದರೆ ಬೇಸರಿಸಿಕೊಳ್ಳುವ ರಾಜೇಶ ಕಟ್ಟಿಟ್ಟ ಟಿಫಿನನ್ನು, "ಆಸ್ಪತ್ರೆಯಲ್ಲಿ ಉಪಯೋಗ ಬರಬಹುದು ನೋಡು" ಎನ್ನುತ್ತ ಚೀಲದಲ್ಲಿ ಹಾಕಿದ. ಕಾರಿನ ಕೀ ತೆಗೆದುಕೊಳ್ಳಲು ಮುಂದಾದ ರಾಜೇಶನನ್ನು ತಡೆದು ನುಡಿದೆ "ಬೇಡ, ಧನ್ವಂತರಿ ಹಾಸ್ಪಿಟಲ್ ಇಕ್ಕಟ್ಟಾದ ಜಾಗದಲ್ಲಿದೆ. ಅಲ್ಲಿ ಕಾರು ಪಾರ್ಕಿಂಗ್ ಮಾಡಲು ಸಿಗುತ್ತದೆ ಎಂದು ಹೇಳಕ್ಕಾಗಲ್ಲ".

ಹೊರ ಬಂದು ಲಿಫ್ಟ್‌ಗೆ ಕಾಯುವಾಗ ಏಕೋ ಕ್ಷಣಗಳು ಯುಗವಾಗುತ್ತಿದೆಯೇನೋ ಎಂದೆನಿಸುತಿತ್ತು. ಹೊರ ಬಂದ ಮೇಲೆ ಸಿಕ್ಕಿದ ಆಟೋದಲ್ಲಿ "ಪೆನ್ಸೆನಗರ" ಎನ್ನುತ್ತಲೇ ಹತ್ತಿದೆವು. ಅಂಕಿತನನ್ನು ಪ್ರತಿದಿನವೂ ಬಿಡುವ 'ಡೇ ಕೇರ್'ನಲ್ಲಿ ಅವನ ಫೆವರೇಟ್ ದೀದಿ ಸಿಕ್ಕರೆ ನನಗೆ "ಬೈ" ಕೂಡ ಹೇಳಲು ಮರೆತು ಅವನು ಓಡುತ್ತಾನೆ. ಇವತ್ತು ಅವಳು ಬರಲಿಲ್ಲ ಅಂತ ಕಾಣುತ್ತದೆ. ನನಗೆ "ಬೈ" ಎಂದು ತಿರುಗಿ ನೋಡುತ್ತಲೇ ಹೋದ. ಆ ಬೇಜಾರಿನಲ್ಲೂ ಏಕೋ ಮನಸ್ಸಿಗೆ ತುಸು ನೆಮ್ಮದಿಯೆನಿಸಿತು.

ಆಟೋದವನಿಗೆ "ಮಾತ್ರೆ ಬ್ರದರ್ಸ್‌ಕೆ ಸಾಮನೆಸೆ ಲೇನಾ ಭಯ್ಯಾ" ಎಂದು ಹೇಳುತ್ತಾ, ನಾನು ಡೊಂಬಿವಿಲಿಯಲ್ಲಿ ಚಿಕ್ಕಂದಿನಿಂದ ಬೆಳೆದಿದ್ದ ಪುಟ್ಟ ಗೂಡನ್ನು ನಿರುಕಿಸುವ ಹಂಬಲದಿಂದ ಆಟೋದಿಂದ ಹೊರಗೆ ಕುತ್ತಿಗೆ ಚಾಚಿದೆ. ಆಗೋ, ಅಲ್ಲೇ ಇದೆ. ನಾನು ನನ್ನ ಅಪ್ಪ - ಅಮ್ಮಾರವರ ಜೊತೆಗೆ ಕಳೆದ ಸವಿ ನೆನಪಿನ ಕ್ಷಣಗಳ ಸಾಕ್ಷಿಯಾಗಿ ಮೆಟ್ಟಿಲುಗಳು ಸವೆದರೂ, ರಿಪೇರಿ ಕಾಣದೇ ಯುಗವಾದರೂ "ನಾನು ಬೀಳಲ್ಲ" ಎನ್ನುವ ದ್ರಾಷ್ಟತನದೊಂದಿಗೆ ಬಿಲ್ಡಿಂಗ್ ನಿಂತುಕೊಂಡೇ ಇತ್ತು. ಪಕ್ಕದಲ್ಲಿ ಬಟಾಟ ವಡಾದ ಸಾಮಾನುಗಳನ್ನು ಹೊರತೆಗೆದು ಕೈ ಗಾಡಿಗಳಲ್ಲಿ ಜೋಡಿಸುತ್ತಿದ್ದ ಧನಂಜಯ ಕಾಕಾ ರೂಢಿ ಬಲವೆಂಬಂತೆ "ಬೇಬಿ" ಎಂದು ಕೂಗಿದ. ಕೈ ಬೀಸಿದೆ. ಅವನ ಮುಖದಲ್ಲೂ ದುಗುಡ ಕಾಣಿಸುತ್ತಿತ್ತು. ಆದರೆ ಆಟೋವನ್ನು ನಿಲ್ಲಿಸಲಿಲ್ಲ. ಚಿಕ್ಕಂದಿನಲ್ಲಿ ವಡಾದ ಪೊಟ್ಟಣ ಕಟ್ಟಿಸಿಕೊಂಡಾಗ ನನಗಾಗಿ ಒಂದು ವಡಾ ಹೆಚ್ಚಾಗಿ ಇಡುವುದನ್ನು 'ಧನಂಜಯ ಕಾಕಾ' ಮರೆಯುತ್ತಿರಲಿಲ್ಲ.

*PAGE DONATED BY : **SHRI S. M. HEGDE,** SANTACRUZ*

ಧನ್ವಂತರಿ ಹಾಸ್ಪಿಟಲದಲ್ಲಿ ಆಪರೇಶನ್ ಥಿಯೇಟರ್ ಹೊರಗೆ ಮುಖ ಕೆಳಗೆ ಹಾಕಿ ಕುಳಿತ ಜಾನಕಿಯನ್ನು ಕಂಡು ಯಾಕೋ ಆಪ್ತರನ್ನು ಕಂಡಂತಾಗಿ ದುಃಖ ಒತ್ತರಿಸಿ ಬಂತು. "ಚಿಕ್ಕಮ್ಮಾ" ಎಂದು ಹತ್ತಿರ ಹೋಗಿ ಕೈ ಹಿಡಿದುಕೊಂಡೆ. "ಅಮ್ಮಾ..." ಎಂದು ಕರೆದ ನಾಲಿಗೆ "ಚಿಕ್ಕಮ್ಮಾ..." ಎಂದು ಪ್ರೀತಿಯಿಂದ ಕರೆದು ಎಷ್ಟು ವರ್ಷಗಳು ಕಳೆದವೊ ಏನೋ. ಅಪ್ಪ ಮದುವೆಯಾಗಿ ಕರೆದುಕೊಂಡು ಬಂದ ಹೊಸತರಲ್ಲಿ ಆಗಾಗ ಹೋಗಿ ಕೈ ಹಿಡಿದುಕೊಳ್ಳುತ್ತಿದ್ದೆ. ಸ್ವಲ್ಪ ಹೊತ್ತಿಗೆ ಅವಳು ಹಗುರವಾಗಿ ಕೈ ಬಿಡಿಸಿಕೊಂಡು ತನ್ನ ಕೆಲಸಕ್ಕೆ ನಡೆವಾಗ ನನ್ನ ಎದೆಗವಚಿಕೊಳ್ಳಲು ಅವಳು "ಅಮ್ಮ" ಅಲ್ಲವಲ್ಲ ಎನ್ನುವ ಅರಿವಾಗುತಿತ್ತು. ನಂತರ ಬಾಯಿ ಮಾತಿಗಾಗಿ "ಚಿಕ್ಕಮ್ಮ" ಎಂದು ಕರೆದರೂ ಅವಳು ಮನಸ್ಸಿನಲ್ಲಿ ಯಾವಾಗಲೂ ಜಾನಕಿ ಮತ್ತು ಸಿಟ್ಟು ಬಂದಾಗ ರಾಕ್ಷಸಿ.

ಜಾನಕಿಯ ಕಣ್ಣುಗಳು ಕೆಂಪಾಗಿದ್ದವು. ಕಣ್ಣಿನ ಸುತ್ತಲಿನ ಕಪ್ಪು ವರ್ತುಲ ಇನ್ನೂ ಹೆಚ್ಚು ಕರ್‍ರಗಾದಂತೆ ತೋರುತಿತ್ತು. ಹಲ್ಲುಗಳು ಇನ್ನಷ್ಟು ಮುಂದೆ ಬಂದಿವೆಯಾ ಅಥವಾ ಕೆನ್ನೆ ಬತ್ತಿದ್ದಕ್ಕೆ ಹಾಗನಿಸುತ್ತದೆಯೊ ಎಂದು ವಿಚಾರ ಮಾಡುತ್ತಿದ್ದೆ.

ಅಷ್ಟರಲ್ಲಿ ಜಾನಕಿ ಬಾಯಿ ಬಿಟ್ಟಳು "ನಿನ್ನೆ ನಿನ್ನಪ್ಪ ಮನೆಯ ಕೆಳಗೆ ಆಟೋದಲ್ಲಿ ಇಳಿಯುತ್ತಿದ್ದರಷ್ಟೇ. ಸ್ಕೂಟರ್‌ನವನು ಯಾವ ಮಾಯದಲ್ಲಿ ಹೊಡೆದನೋ ಏನೋ? ನಿಲ್ಲದೆಯೇ ಹೋಗಿ ಬಿಟ್ಟ. ತಲೆ ಕಲ್ಲಿಗೆ ಹೊಡೆದು ಇಷ್ಟೊಂದು ಅವಾಂತರ ನೋಡು. ಸ್ವಲ್ಪ ಹೊತ್ತಿಗೆ ಎಚ್ಚರ ತಪ್ಪಿ ಹೋಯ್ತು. ಅರೆ ಪ್ರಜ್ಞಾವಸ್ಥೆಯಲ್ಲಿ ಕೇವಲ ನಿನ್ನ ಹೆಸರನ್ನೇ ಹೇಳುತ್ತಿದ್ದರು ನೋಡು".

ಇದ್ದಕ್ಕಿದ್ದಂತೆ ಎ.ಸಿ. ಹೆಚ್ಚಾಯಿತಾ? ಅಥವಾ ನನ್ನ ಉದ್ವೇಗವೋ? ಮೈ ಮೇಲೆಲ್ಲಾ ಮುಳ್ಳುಗಳೆದ್ದವು. ರಾಜೇಶ ಏನನ್ನೋ ಕೇಳುತ್ತಿದ್ದ. ಜಾನಕಿ ಉತ್ತರಿಸುತ್ತಿದ್ದಳು. ನಾನು ಏನನ್ನೂ ಕೇಳುವ ಪರಿಸ್ಥಿತಿಯಲ್ಲಿರಲಿಲ್ಲ. ಅಪ್ಪಾ ನನ್ನ ಹೆಸರನ್ನು ಹೇಳುತ್ತಿದ್ದರೇ? ಅದೇ ಅಪ್ಪ! ಈ ಕೆಂಪಗಾದ ಮುಖ, ಅದುರುವ ತುಟಿಗಳು, ಎತ್ತಿದ ಕೈ... ಅದು ತನ್ನ ಮೇಲೆ ಬೀಳುತ್ತಿದೆ ಎನ್ನುವ ಹೆದರಿಕೆಗೆ ಕಣ್ಣು ಮುಚ್ಚಿದ್ದೆ. ಆದರೆ ಅಪ್ಪ ಕೈ ಹಿಡಿದು ನನ್ನನ್ನು ಧರಧರನೆ ಎಳೆದುಕೊಂಡು ಮನೆಯ ಹೊರಗೆ ಎಳೆದುಕೊಂಡು ಹೋದರು. "ಮನೆ ಹಾಳಿ ನೀನು ಇಲ್ಲಿರಬೇಡ. ನೀನು ಇದ್ದಲ್ಲಿ ವಾತಾವರಣ ಹಾಳಾಗುತ್ತದೆ. ಹಾಳಾಗಿ ಹೋಗು".

"ಹ್ಞಾಂ! ನಾನು ನಿಮಗೆ ಹೆಚ್ಚು. ನಾನಿಲ್ಲಿ ಇರೋಲ್ಲ, ನಿಮಗೆ ನನ್ನ ಕಂಡರೆ ಪ್ರೀತಿ ಇಲ್ಲ. ಚಿಕ್ಕಮ್ಮ ಅಂದರೆ ಇಷ್ಟ. ನಿಖಿಲ್ ಮತ್ತು ನಿಹಾರ್ ಅಂದರೆ ಪ್ರೀತಿ" ಅಂದಿದ್ದೆ.

"ಹಾಗಾದರೆ ನೀನೇತಕೆ ಇಲ್ಲಿ ನಿಂತಿದ್ದೀಯಾ?" ಅಪ್ಪ ನಡುಗುತ್ತಿದ್ದರು. ಜ್ವರದಿಂದ ಕೆಂಪಗಾದ ಅವರ ಮುಖದಿಂದ ನೀರಿಳಿಯುತ್ತಿತ್ತು.

"ಇಲ್ಲಪ್ಪ ನಾನಿಲ್ಲಿರೋಲ್ಲ, ದೊಡ್ಡಪ್ಪನ ಜೊತೆಯಲ್ಲಿಯೇ ಇರ್ತೀನಿ" ಬಿಕ್ಕಳಿಕೆಯ ನಡುವೆ ಹೇಗೇಗೊ ನನ್ನ ಧ್ವನಿ ಹೊರಟಿತ್ತು. ನನ್ನ ಸಹಪಾಠಿಗಳಾದ ಪಿಂಕಿ, ಸುನೀಲರ ಜೊತೆಗೆ ಮೂರನೆಯ ಅಂತಸ್ತಿನ ಮನೆಯಲ್ಲಿರುವ ಎಲ್ಲರೂ ಹೆಚ್ಚು ಕಡಿಮೆ ಹೊರಗೆ ಬಂದಿದ್ದರು. ಶಾಲೆಯಲ್ಲಿ ಯಾವ ಟೀಚರ್ ಕೂಡ ನನ್ನನ್ನು ಕ್ಲಾಸಿನಿಂದ ಹೊರ ಹಾಕಲಿಲ್ಲ. ನನ್ನಪ್ಪ ನನ್ನನ್ನು ಮನೆಯಿಂದ ಹೊರಗೆ ಹಾಕಿದ್ದರು. ಏನಾಗುತ್ತಿದೆ ಎಂದು ಅರಿವಾಗುವ ಮೊದಲೇ ನಾನು ಕೆಳಗೆ ಓಡಿದ್ದೆ. ಪಕ್ಕದ ಮನೆ ಶೀಲಾ ಮೌಸಿ "ಪ್ರಭಾ ಜಾವೂ ನಕೋ ಗೋ" (ಪ್ರಭಾ ಹೋಗಬೇಡ) ಎಂದು ಕೂಗುತ್ತಿದ್ದಳು.

ಆ ದಿನ ಬೆಳಿಗ್ಗೆ ಅಪ್ಪನಿಗೆ ಕೆಂಡಾಮಂಡಲ ಜ್ವರ. 9ನೇ ತರಗತಿಯಲ್ಲಿ ಕಲಿಯುತ್ತಿರುವ ನನಗೆ ಡಬ್ಬಾ ಮಾಡಿ ಕೊಡಲು ಚಿಕ್ಕಮ್ಮನಿಗೆ ಸಮಯವಿರಲಿಲ್ಲ. ಬೆಳಗಿನ ತಿಂಡಿಯೂ ಸಮಯಕ್ಕೆ ಸರಿಯಾಗಿ ತಯಾರಾಗದೇ ನಾನು ಹಾಗೆಯೇ ಹೊರಟಿದ್ದೆ. ಮಧ್ಯಾಹ್ನ ರಿಸೆಸ್ ಸಮಯದಲ್ಲಿ ಡಬ್ಬಾ ತಿನ್ನುವವರನ್ನು ನೋಡಬಾರದೆಂದುಕೊಂಡರೂ ಮೂಗಿಗೆ ತಗಲುವ ಪರಿಮಳ ಅಲ್ಲಿಯೇ ಸೆಳೆಯುತ್ತಿತ್ತು. ನನ್ನ ನೆಚ್ಚಿನ ವಿಷಯವಾದ ಗಣಿತವೂ ಅಂದು ನನ್ನ ತಲೆಯೊಳಗೆ ಹೋಗಲಿಲ್ಲ. ಮಧ್ಯಾಹ್ನ 1.30 ವರೆಗೆ ಮನೆಗೆ ಬರುವಾಗ ಜಾನಕಿ ಗೋಧಿ ಹಿಟ್ಟಿನ ಡಬ್ಬವನ್ನು ಎದುರಿಗಿಟ್ಟು "ಪ್ರಭಾ ಬೇಗನೆ ಚಪಾತಿ ಮಾಡು" ಎನ್ನುವ ಆಣತಿ ಇತ್ತಳು. ನಿಖಿಲ್, ನಿಹಾರ "ಅಕ್ಕ ಬಂದಳು" ಎಂದು ರಾಗವಾಗಿ ಕಾಲು ಸುತ್ತುತ್ತಿದ್ದರು. ನನಗೆ ಪಿತ್ತ ನೆತ್ತಿಗೇರಿತ್ತು. ಹಿಟ್ಟಿನ ಡಬ್ಬಿಯನ್ನು ಕಾಲಿನಿಂದ ಒದ್ದು ಬಿಟ್ಟೆ. ನಿಖಿಲ್ ನಿಹಾರ್‌ನನ್ನು ದೂಡಿ ಬಿಟ್ಟೆ. ನಿಖಿಲ್‌ನ ತಲೆಗೆ ಏನು ತಾಗಿತು ಗೊತ್ತಿಲ್ಲ. ರಕ್ತ ಜಿನುಗತೊಡಗಿತ್ತು. ಜಾನಕಿಯ ಪ್ರವಚನ ಶುರುವಾಗಿತ್ತು. "ನೋಡಿ, ಇವತ್ತು ನೀವಿರುವಾಗಲೇ ಇಷ್ಟೊಂದು ಅವಾಂತರ. ನೀವಿರದಿದ್ದಾಗ ಅವಳು ಏನೇನೂ ಆಟ ಮಾಡಬಹುದು ನೀವೇ ಊಹಿಸಿ. ಎಲ್ಲಾ ಸಹಿಸಿಕೊಳ್ಳುವುದೇ ನನ್ನ ಕರ್ಮವಷ್ಟೇ. ನಾನು ಮಾತನಾಡುವಂತಿಲ್ಲವಲ್ಲ? ಮಲತಾಯಿ ಎನ್ನುವ ಪಟ್ಟ ನನಗಿದೆಯಲ್ಲ".

ಆ ದಿನ ಕೈ ಮೇಲಕ್ಕೆತ್ತಿದ ಅಪ್ಪಾ ನನಗೆ ಹೊಡೆಯಬೇಕಿತ್ತು. "ಯಾಕೇ ತಮ್ಮನಿಗೆ ಹೊಡೆದೆ? ಸುಮ್ಮನೆ ಚಪಾತಿ ಮಾಡು" ಎಂದು ನನಗೆ ಹೇಳಬೇಕಿತ್ತು. ಆದರೆ ಕಾಲಿಗೆ ತಾಗಿದ ಮುಳ್ಳಿನಂತೆ ನನ್ನ ತೆಗೆದು ಬಿಸಾಡಿ ಬಿಟ್ಟಿರಲ್ಲ ಎಂದು ನಾನು ಪರಿತಪಿಸದ ದಿನವಾದರೂ ಇತ್ತೇ?

'ತ್ರೆಂಬಕ್ ಭವನ' ಕಲುಷಿತ ಹವೆಯನ್ನು ಉಗುಳುತ್ತ ಸಾಗುವ ಅನೇಕ ಆಟೋಗಳ, ರಸ್ತೆಯ ಮೇಲೆ ಸಾಲು ಸಾಲಾಗಿ ಕುಳಿತ ತರಕಾರಿ ಬುಟ್ಟಿಗಳ, ಬಿಸಿ ಚಹಾ ಕೊಡುವ ಟೀ ಸ್ಟಾಲ್‌ಗಳ, ಎಣ್ಣೆಯಲ್ಲಿ ಹೊರಳಾಡಿ ಹೊರ ಬರುವ ಬಟಾಟ ವಡಗಳ ನಡುವೆ ನಿಂತ ಕಟ್ಟಡ. ಅದರಲ್ಲಿ C/23 ಎನ್ನುವ ಫಲಕ ಹೊತಿದ್ದು ನನ್ನ ಮನೆ. ಒಂದು ಹಾಲ್, ಅಡುಗೆ ಮನೆ ಅದಕ್ಕಂಟಿಕೊಂಡೇ ಇದ್ದ ಬಾತ್‌ರೂಮ್ ಟಾಯ್ಲೆಟ್. ಆ ಚಿಕ್ಕ ಗೂಡಿನಲ್ಲಿ ಬೆಚ್ಚಗೆ ಬೆಳೆದಿದ್ದೆ. "ಪಬ್ಬು... ಪಬ್ಬು..." ಎಂದು ಸದಾ ಮುದ್ದು ಮಾಡುವ ಅಮ್ಮ. ನನ್ನ ತಲೆಯ ಮೇಲೆ ಯಾವಾಗಲೂ ಕೈಯಾಡಿಸುತ್ತ ಇದ್ದ ಮಿತ ಭಾಷಿ ಹಸನ್ಮುಖಿ ಅಪ್ಪ. ಗುಂಡು ಗುಂಡಾಗಿದ್ದ ನನ್ನನ್ನು "ಅಮ್ಚಿ ಪೊರ್ಗಿ" ಎಂದು ಮುದ್ದು ಮಾಡುವ ನೆರೆಹೊರೆಯವರು. ಯಾರ ದೃಷ್ಟಿ ತಾಗಿತೋ? ಮೂರು ದಿನಗಳ ಮಿದುಳು ಜ್ವರದ ನಿಮಿತ್ತವಾಗಿ ಅಮ್ಮ ಬಿಟ್ಟು ಹೊರಟೇ ಬಿಟ್ಟಳು. ಊರಿಂದ ಕರೆದುಕೊಂಡು ಬಂದ ಕೆಲಸದ ಹುಡುಗಿಯರು, ಹೆಂಗಸರು ಸ್ವಲ್ಪ ದಿನಕ್ಕೆ ಇದ್ದು, ಬಿಟ್ಟು ಹೋಗುತ್ತಿದ್ದರು. ನಂತರ ಅಪ್ಪ ಮದುವೆಯಾಗಿ ಊರಿನಿಂದ ಚಿಕ್ಕಮ್ಮನನ್ನು ಖಾಯಂ ಆಗಿ ಕರೆದುಕೊಂಡು ಬಂದು ಬಿಟ್ಟ. ಅಮ್ಮ ಯಾವಾಗಲೂ ನಗುತ್ತಿದ್ದಳು. ಆದರೆ ಚಿಕ್ಕಮ್ಮ ಹೆಚ್ಚು ನಗುತ್ತಿರಲಿಲ್ಲ. ನಕ್ಕರೆ ಉಬ್ಬಿದ ಹಲ್ಲು ಹೊರ ಬಂದು ಬಿಡುತ್ತದೆ ಅಂತ ಚಿಕ್ಕಮ್ಮ ಬಾಯಿಯನ್ನು ಗಟ್ಟಿಯಾಗಿ ಮುಚ್ಚಿಕೊಂಡಿರುತ್ತಾಳೆ ಅಂತ ನನಗೆ ಆವಾಗ ಅನಿಸುತ್ತಿತ್ತು.

ಜಾನಕಿ ಮತ್ತು ರಾಜೇಶರವರ ಪಿಸುಮಾತು ನಿಂತು ಹೋಗಿತ್ತು. ರಾಜೇಶ ಮಾತುಗಾರ. ಸಂದರ್ಭಕ್ಕೆ ತಕ್ಕಂತೆ ಮಾತು ಬದಲಾಯಿಸುವ ಚತುರತೆಯೂ ಅವನಿಗಿದೆ. ನನ್ನ ಹಾಗೆ ಮುಂಗೋಪಿಯಲ್ಲ. ನನ್ನ ಮುಂಗೋಪಿತನವಾದರೂ ಎಲ್ಲಿ ತನಕ ಇತ್ತು? ಅಪ್ಪ ಮನೆಯಿಂದ ಹೊರಗೆ ಹಾಕುವ ತನಕ ತಾನೇ.

ಒಮ್ಮೆಲೇ ಆಪರೇಶನ್ ಥಿಯೇಟರ್‌ನ ಹೊರಗೆ ಮೌನ ಹೆಚ್ಚಾದಂತೆನಿಸಿ ಸಂತೆಯ ಗಲಾಟೆಗಿಂತಲೂ ಹೆಚ್ಚು ಕರ್ಕಶವೆನಿಸುತ್ತಿತ್ತು. ನನ್ನ ಎದುರಿಗೆ ಕುಳಿತ ಹೆಂಗಸಿನ ದುಪ್ಪಟ್ಟ ಹಾರುತ್ತಿತ್ತು. ಸ್ವಚ್ಛವಾದ ಶುಭ್ರ ಬಿಳಿ ಬಟ್ಟೆ. ಆಪರೇಶನ್ ಥಿಯೇಟರ್‌ನಲ್ಲಿ ಜೀವಕ್ಕಾಗಿ ಪ್ರಯತ್ನ ನಡೆಯುತ್ತಿರುವಾಗ ಹೊರಗೆ ಶೋಕ ಸೂಚಕ ಬಿಳಿ ಬಟ್ಟೆ ಹಾಕಿಕೊಳ್ಳಬಾರದು ಅಂತೇನೋ ವಿಚಾರ ಬಂತು. ಆ ವಾತಾವರಣದಲ್ಲಿಯೂ ನನಗೆ ನಾನು ಸಿಲ್ಲಿ ಅನಿಸಿ ನಗು ಬಂದಂತಾಯಿತು.

*PAGE DONATED BY : **SMT. SHANTA V. HEGDE,** CARMICHAEL ROAD*

ಅಪ್ಪನ "ಹಾಳಾಗಿ ಹೋಗು" ಎನ್ನುವ ಶಬ್ದದ ಹೊರೆ ಹೊತ್ತುಕೊಂಡೇ ಕೆಳಗೋಡಿದವಳು "ಮಿಲಾಪ್ ನಗರ" ಎಂದು ದೊಡ್ಡಪ್ಪನ ಮನೆಯ ವಿಳಾಸವನ್ನು ಹೇಳಿದ್ದೆ. ದೊಡ್ಡಪ್ಪನದ್ದೋ ಬಂಗಲೆ. ಸುತ್ತುಮುತ್ತಲೂ ಗಿಡ - ಮರಗಳು. ಕಣಗಲೆ, ಸಂಪಿಗೆ ಹೂವಿನ ಸೊಂಪುಗಳ ನಡುವೆ ಹಸಿರು ಲಾನ್. ದೊಡ್ಡಪ್ಪನ ಕೆಮಿಕಲ್ ಫ್ಯಾಕ್ಟರಿ ಚೆನ್ನಾಗಿ ನಡೆಯುತ್ತಿತ್ತು. ದೊಡ್ಡಮ್ಮ ಕೂಡ ಸೌಮ್ಯ ಸ್ವಭಾವದವರು. ಅಮ್ಮ ಇರುವಾಗ ಅವರಿಬ್ಬರೂ ಚೆನ್ನಾಗಿ ಹೊಂದಿಕೊಂಡಿದ್ದರು. ದೊಡ್ಡಪ್ಪನ ಒಬ್ಬನೇ ಮಗ ಪ್ರದೀಪಣ್ಣ ಮೆಡಿಸಿನ್ ಮಾಡಿ ಹೆಚ್ಚಿನ ವ್ಯಾಸಂಗಕ್ಕಾಗಿ ಅಮೇರಿಕಾಕ್ಕೆ ಹೋದವನು ಅಲ್ಲಿಯ ಹುಡುಗಿಯನ್ನೇ ಮದುವೆಯಾಗಿ ಅಲ್ಲಿಯೇ ನೆಲೆಸಿದ್ದ. ಎರಡು ಮೂರು ವರ್ಷಗಳಿಗೊಮ್ಮೆ ಬಂದು ಮುಖ ತೋರಿಸುತ್ತಿದ್ದ. ಈಗ ಪ್ರದೀಪಣ್ಣನ ಮನೆಗೆ ಎರಡು ತಿಂಗಳಿಗೆ ತಿರುಗಿ ಬರುತ್ತೇವೆ ಎಂದು ಹೋದ ದೊಡ್ಡಪ್ಪ ದೊಡ್ಡಮ್ಮ ಇನ್ನೂ ತಿರುಗಿ ಬಂದಿರಲಿಲ್ಲ. ಬಹುಶಃ ದಿನ ಕಳೆದಂತೆ ಬಿಳಿ ಸೊಸೆ ಕ್ಯಾಥರಿನ್‌ಳ ಒಳ್ಳೆಯ ಗುಣಗಳು ಅವರಿಗೆ ತೋರುತ್ತಿರಬಹುದು ಅಥವಾ ಮೊಮ್ಮಕ್ಕಳ ತುಂಟಾಟಗಳಲ್ಲಿ ಮೈ ಮರೆತಿರಬಹುದು. ಮೊಮ್ಮಕ್ಕಳ ಹತ್ತಿರ ಮಾತನಾಡಲೆಂದೇ ದೊಡ್ಡಮ್ಮ ಇಂಗ್ಲೀಷ್ ಟ್ಯೂಶನ್ ಬೇರೆ ತೆಗೆದುಕೊಂಡಿದ್ದಳು.

ಏರ್ ಕಂಡೀಶನ್ ಹವೆ ಜಾಸ್ತಿಯೇ ತಂಪಾದಂತೆ ಅನಿಸಿ ದುಪ್ಪಟ್ಟವನ್ನು ಗಟ್ಟಿಯಾಗಿ ಹೊದ್ದುಕೊಂಡೆ. ಆಪರೇಶನ್ ಟೇಬಲ್ ಮೇಲೆ ಅಪ್ಪ ಹೇಗೆ ಮಲಗಿರಬಹುದು ಎನ್ನುವ ವಿಚಾರ ಬರುತ್ತಿತ್ತು. ಜಾನಕಿ ಮನೆಯೊಳಗೆ ಹೊಕ್ಕುವವರೆಗೂ ಅಪ್ಪನ ಚಾದರದೊಳಗೆ ಅವನ ಹೊಟ್ಟೆ ಹಿಡಿದುಕೊಂಡು ಮಲಗುತ್ತಿದ್ದೆ. ಕೆಲಸದವಳು ಅಡುಗೆ ಮನೆಯ ತುದಿಗಿದ್ದ ಬೆಂಚಿನ ಮೇಲೆ ಹಾಸಿಗೆ ಹಾಕಿ ಮಲಗುತ್ತಿದ್ದಳು. ಜಾನಕಿ ಬಂದ ಮೇಲೆ ಕೆಲಸದವಳನ್ನು ಊರಿಗೆ ಕಳುಹಿಸಿ ಆ ಹಾಸಿಗೆಯ ಮೇಲೆ ನನಗೆ ಮಲಗೆಂದರು.

ಮೊದಲ ಬಾರಿ ನಾನು ತುಂಬಾ ಹಠ ಮಾಡಿದ್ದೆ. "ಕೆಲಸದವಳು ಮಲಗಿದ ಹಾಸಿಗೆಯ ಮೇಲೆ ನಾನು ಮಲಗುವುದಿಲ್ಲ". ಆಗ ಗಾದಿ ಬೇರೆ ಮಾಡಿಸಿ ತಂದರು. ಆದರೆ ಜಾಗ ಬೇರೆಯಾಗಲಿಲ್ಲ. ವರ್ಷ ಕಳೆಯುವವರೆಗೆ ಅವಳಿ ಜವಳಿ ತಮ್ಮಂದಿರು ನಿಹಾರ್ ಮತ್ತು ನಿಖಿಲ್ ಬಂದರು. ಅಡುಗೆ ಮನೆಗೆ ತಾಗಿಕೊಂಡಿದ್ದ ಪುಟ್ಟ ಗ್ಯಾಲರಿಯಲ್ಲಿ ಓದುವ ಟೇಬಲ್ ಹಾಕಿ, ಗ್ಯಾಲರಿಯನ್ನು ಅರ್ಧ ಮುಚ್ಚಿ ಓದುವ ಕೋಣೆಯಾಯಿತು. ಮಳೆಗಾಲದಲ್ಲಿ ಮತ್ತೆ ಅಡುಗೆ ಮನೆಯೇ ಗತಿಯಾಗಿ ಬಿಡುತ್ತಿತ್ತು. ನಿಹಾರ್ ಜಾನಕಿಯ ಬಳಿ ಮಲಗಿದರೆ ನಿಖಿಲ್ ಅಪ್ಪನ ಹೊಟ್ಟೆ ಹಿಡಿದು ಮಲಗುತ್ತಿದ್ದ. ಥೇಟ್ ನನ್ನ ಥರಹ.

ದೊಡ್ಡಪ್ಪನ ಮನೆಯಲ್ಲಿ ಡನ್‌ಲಪ್ ಹಾಸಿಗೆಯ ಬೆಡ್ ರೂಮು. ಹೂ ದಾನಿಯಲ್ಲಿ ಪ್ರತಿದಿನ ತೋಟದಿಂದ ತಾಜಾ ಹೂಗಳು. ಬೆಳಿಗ್ಗೆ ಹಕ್ಕಿಗಳ ಚಿಲಿಪಿಲಿ. ಆದರೂ ನನ್ನ ಕಿವಿಗಳಲ್ಲಿ ಪೆನ್ಸೆ ನಗರದ ಪಾವ್‌ವಾಲಾನ ಪೌಂ ಪೌಂ ಸದ್ದು. ಓಡಾಡುವ ಹಾಲು ಗಾಡಿಗಳ ಚಕ್ರಗಳ ಸದ್ದು. ಅಡುಗೆಯವ ಚೆನ್ನಪ್ಪ ಬೆಳಿಗ್ಗೆ ಚಹಾ ಮಾಡಿ "ಬೇಬಿ" ಎಂದು ಕರೆಯುವಾಗ ನಾನು ಬೆಳಿಗ್ಗೆ ಎದ್ದು ಅಪ್ಪನಿಗೆ ಚಹಾ ಮಾಡಿಕೊಡುವ ನೆನಪು. ಆಗ ಅಪ್ಪಾ ಕಣ್ಣು ಮಿಟುಕಿಸಿ ಹೇಳುತ್ತಿದ್ದರು. "ಚಿಕ್ಕಮ್ಮನಿಗಿಂತ ನೀನೇ ಚೆನ್ನಾಗಿ ಚಹಾ ಮಾಡುತ್ತೀಯಾ". "ನಾನು ಅಭ್ಯಾಸ ಮಾಡಬೇಕಾದರೆ ನನಗೆ ತೊಂದರೆ ಮಾಡಬೇಡಿ" ಎಂದು ಸಾರಿ ಹೇಳಿದರೂ ಕೇಳದೆ ಬಂದು ನನ್ನ ಕಾಲು ಸುತ್ತುವ ನಿಹಾರ್ ಮತ್ತು ನಿಖಿಲ್‌ರ ನೆನಪು. ಮೊದಲನೇ ರ್‍ಯಾಂಕ್ ತಪ್ಪಿದಾಗಲೆಲ್ಲ "ಚಿಕ್ಕಮ್ಮ ನನಗೆ ಕೆಲಸ ಹೇಳ್ತಾಳೆ ಅದಕ್ಕೆ ನನಗೆ ಓದೋಕ್ಕಾಗ್ತಿಲ್ಲ" ಎಂದು ನಾನು ಅಪ್ಪನಿಗೆ ದೂರು ಹೇಳುವ ನೆನಪು.

ನನಗೆ ಒಳ್ಳೆಯ ಮಾರ್ಕ್ಸ್‌ಗಳು ಬಂದಾಗ ದೊಡ್ಡಪ್ಪ ಮಿಠಾಯಿ ಡಬ್ಬಗಳನ್ನೇ ತಂದಾಗ, ಅಪ್ಪ ತಂದು ಕೊಡುವ ಕ್ಯಾಡ್‌ಬರಿ ಎಕ್ಲೇರ್ಸ್‌ನ ನೆನಪು. ಈ ಎಲ್ಲಾ ನೆನಪಿನ ನಡುವೆಯೂ ಯಾವಾಗಲೂ ಒಬ್ಬಳೇ ಆ ಮನೆಯ ಮೆಟ್ಟಿಲನ್ನು ಹತ್ತಲಿಲ್ಲ.

10ನೇ ಇಯತ್ತೆಯಲ್ಲಿ ಮಾರ್ಕ್ಸ್ ಕಾರ್ಡನ್ನು ನೋಡಿ ಹಿರಿಹಿರಿ ಹಿಗ್ಗುತ್ತಾ ಮನೆಯ ಕೆಳಗೆ ಬಂದಿದ್ದೆ. ಮನೆಯ ಕೆಳಗಿನ ಬಟಾಟ ವಡ ಮಾರುವ ಧನಂಜಯ ಕಾಕಾ, ಗಣೇಶ ಟೈಲರ್ಸ್, ಕಿರಾಣಿ ಅಂಗಡಿಯ ರಾಮು ಕಾಕಾ ಇವರಿಗೆಲ್ಲ ನನ್ನ ಮಾರ್ಕ್ಸ್ ಕಾರ್ಡ್ ತೋರಿಸಿದರೂ ಮೇಲೆ ಹೋಗಲು ಮಾತ್ರ ಕಾಲು ಮುಂದಾಗಿರಲಿಲ್ಲ. ಯಾವಾಗಲಾದರೂ ಮನೆಗೆ ಹೋಗಿದ್ದರೆ ಅದು ದೊಡ್ಡಪ್ಪ - ದೊಡ್ಡಮ್ಮನ ಜೊತೆಯಲ್ಲಿ ಮಾತ್ರ. ಅವರ ಕಾರಿನಲ್ಲಿ. ಕೈಯಲ್ಲಿ ಎಲ್ಲರಿಗಾಗಿ ಬಟ್ಟೆಯನ್ನೋ ಮಿಠಾಯಿಯನ್ನೋ ಹಿಡಿದುಕೊಂಡು ಒಂದು ಗತ್ತಿನಲ್ಲಿ. ನನ್ನ ಬಟ್ಟೆಯನ್ನು ನಿಹಾರ್ ನಿಖಿಲ್ ಮುಟ್ಟಿ ನೋಡಿ "ಹೊಸತಾ?" ಎಂದು ಕೇಳಿದಾಗ, "ಹೌದು. ನಿಮಗೂ ತಂದಿದೇನಲ್ಲ" ಎನ್ನುವ ಔದಾರ್ಯ ತೋರುತ್ತಿದ್ದೆ. ಚಿಕ್ಕಮ್ಮನೂ ನನಗೆ ಇಷ್ಟವಾದ ತಿಂಡಿ ಮಾಡಿ ಇಡುತ್ತಿದ್ದಳಲ್ಲ! ಅಪ್ಪ ಹೇಳುತ್ತಿದ್ದನೇ? ಅಥವಾ ನಾನು ಮನೆಯ ಹೊರ ಬಿದ್ದಿದ್ದಕ್ಕೆ ಸಂತೋಷ ವ್ಯಕ್ತಪಡಿಸುವ ರೀತಿಯಾಗಿತ್ತೇ?

"ಇವಳು ನಮ್ಮ ಮನೆಯ ಪ್ರಭೆ. ಯಾವಾಗಲೂ ಮೊದಲನೆ ನಂಬರ್ ಬರುತ್ತಾಳೆ. ತಪ್ಪಿದರೆ ಎರಡನೇ ರ್‍ಯಾಂಕ್ ಅದಕ್ಕಿಂತ ಕೆಳಗಿಳಿದವಳಲ್ಲ" ಅನ್ನುತ್ತಿದ್ದ ಅಪ್ಪ ನನ್ನನ್ನು ಮನೆಯ ಕೆಳಗೆ ತಳ್ಳಿಯೇ ಬಿಟ್ಟನಲ್ಲ. ಅಂತಹ ತಪ್ಪನ್ನು ನಾನು ಮಾಡಿದ್ದೇನೆಯೇ? ಅದರಲ್ಲಿ ಹಾಗಾದರೆ ತಪ್ಪು ಯಾರದಾಗಿತ್ತು? ನನ್ನ ಮತ್ತು ಜಾನಕಿಯ ಜಗಳದಲ್ಲಿ ಸೋತು ನಲುಗುತ್ತಿರುವ ಅಪ್ಪನದೇ? ನನ್ನ ಕೆಟ್ಟ ಕನಸಿನ ಕಿರುಚಾಟ ಮಾತ್ರಕ್ಕೇ ದಿನ ಕಳೆದಂತೆ ಅಸಹನೆ ತೋರಿಸುತ್ತಿದ್ದ ಗಂಡ ರಾಜೇಶ. ದಿನನಿತ್ಯದ ಕಿರಿಕಿರಿಗೆ ಎಷ್ಟು ಬೇಸತ್ತಿರಬೇಡ ಅಪ್ಪ! ಹಳ್ಳಿಯ ದೊಡ್ಡ ಮನೆಯಿಂದ ಡೊಂಬಿವಲಿಯ ಬೆಂಕಿ ಪೊಟ್ಟಣದಂತಹ ಮನೆಯಲ್ಲಿ, ಎರಡು ಸಣ್ಣ ಮಕ್ಕಳೊಂದಿಗೆ ಹೆಣಗಾಡುವ ಜಾನಕಿಯ ಅಸಹನೆಯ ಕೇಂದ್ರ ಬಿಂದು ನಾನಾಗಿ ಹೋಗಿದ್ದು ಅವಳ ತಪ್ಪೇ?

ನನ್ನ ಕಣ್ಣಿನಲ್ಲಿ ಅಪ್ಪ ತಪ್ಪಿತಸ್ಥನೇ ಆಗಿದ್ದ. ನನ್ನ ಇಂಜಿನಿಯರಿಂಗ್ ಕೋರ್ಸ್ ಮುಗಿದು ಮ್ಯಾನೇಜ್‌ಮೆಂಟ್ ಕೋರ್ಸ್ ಮಾಡುವಾಗ ಪರಿಚಯವಾದ ರಾಜೇಶನ ಸ್ನೇಹ ಮದುವೆಯವರೆಗೆ ಬಂದಾಗ ಅದೆಷ್ಟು ಮನಸ್ಸಿನಲ್ಲಿ ಮಂಡಿಗೆ ತಿಂದಿದ್ದೆ. ಅಪ್ಪ ಧಾರೆಯೆರೆದು ಕೊಡಲು ಮುಂದೆ ಬರುತ್ತಾರೆ. ಆಗ ನಾನು ಮುಂದೆ ಹೇಳುತ್ತೇನೆ "ನನ್ನನ್ನು ಓದಿಸಿ ನನ್ನ ಕಾಲ ಮೇಲೆ ನಿಲ್ಲುವಂತೆ ಮಾಡಿದವರು ದೊಡ್ಡಪ್ಪ - ದೊಡ್ಡಮ್ಮ. ಅವರೇ ನನ್ನ ಧಾರೆಯೆರೆದು ಕೊಡಲಿ" ಆದರೆ ಅದಕ್ಕೂ ಅಪ್ಪ ಆಸ್ಪದ ಕೊಟ್ಟಿರಲಿಲ್ಲ! ತಾವಾಗಿಯೇ ದೊಡ್ಡಪ್ಪನ ಹತ್ತಿರ ಬಂದು ಹೇಳಿ ಬಿಟ್ಟಿದ್ದರು. "ಅಣ್ಣಾ, ನೀನು ಮತ್ತು ಅತ್ತಿಗೆ ಅವಳ ತಂದೆ - ತಾಯಿ. ನೀವೇ ಧಾರೆಯೆರೆದು ಕೊಡಿ". ಪ್ರತೀಕಾರ ತೀರಿಸಿಕೊಳ್ಳುವ ಒಂದೇ ಒಂದು ಆಸೆಯೂ ಈಡೇರದೆ ಹೋಯಿತಲ್ಲ ಎಂದು ನನಗನಿಸಿದ್ದುಂಟು.

ಅರೆಪ್ರಜ್ಞಾವಸ್ಥೆಯಲ್ಲಿ ಅಪ್ಪ ನಿನ್ನ ಹೆಸರೊಂದನ್ನೇ ಕರೆಯುತ್ತಿದ್ದ ಎನ್ನುವ ಜಾನಕಿಯ ಮಾತು ಕಿವಿಯಲ್ಲಿ ಮತ್ತೊಮ್ಮೆ ರಿಂಗಣಿಸಿತು. ಹೇಳುವಾಗ ಗಂಟಲು ಉಬ್ಬಿ ಬಂದಿತ್ತು. ಕಷ್ಟವಾಗಿರಬೇಕವಳಿಗೆ. "ನಮ್ಮ ಮನೆಯ ಬೆಳಕು ಇವಳು" ಎಂದು ನನ್ನ ಮೇಲಕ್ಕೆತ್ತುತ್ತಿದ್ದ ಅಪ್ಪ. ನನ್ನ ಪ್ರೀತಿಯ ಅಪ್ಪ. ಅವನು ನನ್ನ ಕೆಡುಕನ್ನು ಬಯಸಿಯಾನೆ? ಎಂದೂ ನನಗೆ ಹೊಡೆಯದ ಅಪ್ಪ ಆ ದಿನವೂ ನನಗೆ ಹೊಡೆಯದೆ ಮನೆಯಿಂದ ಹೊರಗೆ ಎಳೆದಿದ್ದು 'ಆಶೀರ್ವಾದ'ದ ರೂಪದಲ್ಲಿ ಎಂದೆನಿಸಿ ಮೈ ಝುಂ ಎಂದಿತು. ದೊಡ್ಡಪ್ಪನ ಮನೆಯಲ್ಲಿ ನಾನು ಚೆನ್ನಾಗಿರುತ್ತೇನೆ ಎನ್ನುವ ಭರವಸೆ ನನಗೆ ಒಳ್ಳೆಯದಾಗಲಿ ಎನ್ನುವ ಹಾರೈಕೆ ಅದರಲ್ಲಿ ಅಡಗಿತ್ತೇ?

ಆಪರೇಶನ್ ಥಿಯೇಟರ್‌ನಿಂದ ಹೊರ ಬಂದ ಡಾಕ್ಟರ್ ಹತ್ತಿರ ರಾಜೇಶ ಕೇಳುತ್ತಿದ್ದಾನೆ. "ಡಾಕ್ಟ್ರೇ, ಏನೂ ಭಯವಿಲ್ಲ ತಾನೇ?".

*(ಆಧಾರ : ಗೋಕುಲವಾಣಿ ಬೆಳ್ಳಿಹಬ್ಬ ಸಂಭ್ರಮ ಸಂಚಿಕೆ-2013)*

PAGE DONATED BY : **SMT. MADHU HEGDE**, SANTACRUZ

# ಸಂಕ್ಷಿಪ್ತ ಸುದ್ದಿಗಳು

## ಜೋಕಟ್ಟೆ ಅವರ ಕೃತಿ ಲೋಕಾರ್ಪಣೆ



ಮುಂಬಯಿಯ ಹಿರಿಯ ಪತ್ರಕರ್ತ, ಅಂಕಣಕಾರ ಶ್ರೀನಿವಾಸ ಜೋಕಟ್ಟೆ ಅವರ 23ನೇ ಕೃತಿ 'ಡ್ರಾಗನ್ ಮತ್ತು ಗಂಗಾಜಲ'ವನ್ನು ಎ.16 ರಂದು ಸಂಜೆ ಕರ್ನಾಟಕ ಸಂಘ ಮುಂಬಯಿಯ ಸಮರಸ ಭವನದಲ್ಲಿ ಲೋಕಾರ್ಪಣೆಗೊಳಿಸಲಾಯಿತು.

ಶ್ರೀರಾಮ ಪ್ರಕಾಶನ ಮಂಡ್ಯ ಪ್ರಕಾಶಿತ ಈ ಕೃತಿಯನ್ನು ಕರ್ನಾಟಕ ಸಂಘ ಮುಂಬಯಿ ಸಹಯೋಗದಲ್ಲಿ ಖ್ಯಾತ ಕವಿ, ಲೇಖಕ ಮತ್ತು ಚಿಂತಕ ಮೋಹನ್ ನಾಗಮ್ಮನವರ ಅವರು ಬಿಡುಗಡೆಗೊಳಿಸಿದರು.

ಈ ಸಂದರ್ಭ ಮಾತನಾಡಿದ ಮೋಹನ್ ನಾಗಮ್ಮನವರ ಅವರು, ಜೋಕಟ್ಟೆ ಅವರ 23ನೇ ಕೃತಿ ಬಿಡುಗಡೆಗೊಳಿಸುವ ಅವಕಾಶ ಸಿಕ್ಕಿರುವುದಕ್ಕೆ ತುಂಬಾ ಸಂತೋಷವಾಗುತ್ತಿದೆ. ಜೋಕಟ್ಟೆ ಅವರು ಪತ್ರಕರ್ತರಾಗಿ, ಅಂಕಣಕಾರರಾಗಿ, ಮಹತ್ತರ ಸಾಧನೆ ಮಾಡಿದ್ದಾರೆ. ಅವರು ವಿಷಯ ಸಂಗ್ರಹಿಸಿ ಅಭ್ಯಾಸ ಮಾಡಿ ಸೂಕ್ಷ್ಮವಾಗಿ ಬರೆಯುತ್ತಾರೆ. ಅವರು ಓರ್ವ ಅಪೂರ್ವ ಶಿಸ್ತಿನ ಬರಹಗಾರ ಎಂದು ನುಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ನಗರದ ಹಿರಿಯ ಸಾಹಿತಿ ಡಾ. ಸುನೀತಾ ಶೆಟ್ಟಿ ಅವರು ಮಾತನಾಡುತ್ತಾ, ಜೋಕಟ್ಟೆ ಅವರ ಪ್ರವಾಸ ಲೇಖನವನ್ನು ನಾನು ಬಹಳವಾಗಿ ಮೆಚ್ಚಿಕೊಂಡಿದ್ದೇನೆ. ಅವರ ಎಲ್ಲಾ ಬರಹಗಳಲ್ಲಿ ಸೂಕ್ಷ್ಮತೆ, ತಿರುವು ಇದೆ. ಓದುಗರ ಮನವನ್ನು ವಿಶಿಷ್ಟವಾಗಿ ಹಿಡಿತದಲ್ಲಿಡುವ ಗುಣವನ್ನು ಅವರ ಬರಹಗಳಲ್ಲಿ ಕಾಣಬಹುದಾಗಿದೆ. ಜೋಕಟ್ಟೆ ಅವರು ತಾವು ಸಂಗ್ರಹಿಸಿದ ತಮ್ಮ ಅನುಭವಗಳನ್ನು ಅಚ್ಚುಕಟ್ಟಾಗಿ ಬರೆಯುತ್ತಾರೆ. ಅವರಿಂದ ಮತ್ತಷ್ಟು ಕೃತಿಗಳು ಮೂಡಿ ಬರಲಿ ಎಂದರು.

ದುರ್ಗಪ್ಪ ಕೋಟಿಯಾವರ್ ಕೃತಿ ಸಮೀಕ್ಷೆ ಮಾಡಿದರು. ಆರಂಭದಲ್ಲಿ ಕರ್ನಾಟಕ ಸಂಘದ ಗೌರವ ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಅವರು ಸ್ವಾಗತಿಸಿದರೆ, ರಂಗತಜ್ಞ ಡಾ. ಭರತ್ ಕುಮಾರ್ ಪೊಲಿಪು ಅವರು ಕಾರ್ಯಕ್ರಮ ನಿರೂಪಿಸಿದರು.

## ಮುಂಬಯಿ ವಿವಿ ಕನ್ನಡ ವಿಭಾಗದಲ್ಲಿ ಶಿಮುಂಜೆಪರಾರಿ ಸಾಹಿತ್ಯ ಸಂಭ್ರಮ; ವಿಚಾರಸಂಕಿರಣ, ಅಭಿನಂದನ ಗ್ರಂಥ ಬಿಡುಗಡೆ, ಗೌರವಾರ್ಪಣೆ

ಕನ್ನಡದ ಹಿರಿಯ ಸಾಹಿತಿ, ಕವಿ, ಚಿಂತಕ, ಶಿಮುಂಜೆ ಪರಾರಿ ಅವರ ಅಭಿನಂದನ ಸಮಾರಂಭವನ್ನು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಹಾಗೂ ಶಿಮುಂಜೆಪರಾರಿ ಅಭಿನಂದನ ಸಮಿತಿ ಮುಂಬಯಿ ಅವರ ಜಂಟಿ ಆಶ್ರಯದಲ್ಲಿ ಎ.16ರಂದು ಅಪರಾಹ್ನ 2ರಿಂದ ಸಾಂತಾಕ್ರೂಜ್ ಪೂರ್ವದ ವಿದ್ಯಾನಗರಿಯ ಮುಂಬಯಿ ವಿಶ್ವವಿದ್ಯಾಲಯದ ರಾನಡೆ ಭವನದ ಪಕ್ಕದಲ್ಲಿರುವ ಕವಿವರ್ಯ ಕುಸುಮಾಗ್ರಜ ಮರಾಠಿ ಭಾಷಾ ಭವನದಲ್ಲಿ ಆಯೋಜಿಸಲಾಗಿತ್ತು.



ಸಮಾರಂಭದ ಅಧ್ಯಕ್ಷತೆಯನ್ನು ಖ್ಯಾತ ಉದ್ಯಮಿ ದಿವಾಕರ ಎನ್. ಶೆಟ್ಟಿ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕನ್ನಡಿಗ ಪತ್ರಕರ್ತರ ಸಂಘ ಮಹಾರಾಷ್ಟ್ರ ಅಧ್ಯಕ್ಷ ಚಂದ್ರಶೇಖರ ಪಾಲೆತ್ತಾಡಿ, ಬಂಟರ ಸಂಘ ಅಂಧೇರಿ-ಬಾಂದ್ರಾ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರಾದ ಗುಣಪಾಲ ಶೆಟ್ಟಿ ಐಕಳ, ನ್ಯಾಯವಾದಿ ಕಡಂದಲೆ ಪರಾರಿ ಪ್ರಕಾಶ್ ಎಲ್. ಶೆಟ್ಟಿ, ಹೊಟೇಲ್ ಅವೆನ್ಯೂ ಮಾಲಕರಾದ ರಘುರಾಮ ಶೆಟ್ಟಿ, ಕ್ವಾಲಿಟಿ ಕ್ಯಾಟರರ್ಸ್‌ನ ಮಾಲಕ ಭುಜಂಗ ಶೆಟ್ಟಿ ಮೊದಲಾದವರು ಪಾಲ್ಗೊಂಡಿದ್ದರು.

ಸಮಾರಂಭದಲ್ಲಿ ಡಾ। ಜಿ.ಎನ್. ಉಪಾಧ್ಯ ಅವರ ಗೌರವ ಸಂಪಾದಕತ್ವದಲ್ಲಿ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಸಂಪ್ರೀತಿ ಅಭಿನಂದನ ಗ್ರಂಥವನ್ನು ಗಣ್ಯರು ಬಿಡುಗಡೆಗೊಳಿಸಿದರು.

ಗಣ್ಯರ ಸಮ್ಮುಖದಲ್ಲಿ ಸಾಹಿತಿ ಶಿಮುಂಜೆ ಪರಾರಿ ಅವರನ್ನು ಶಾಲು ಹೊದೆಸಿ, ಮೈಸೂರು ಪೇಟ ತೊಡಿಸಿ, ಫಲಪುಷ್ಪ, ಸ್ಮರಣಿಕೆ, ಸಮ್ಮಾನ ಪತ್ರ ಹಾಗೂ ನಿಧಿಯನ್ನಿತ್ತು ಗೌರವಿಸಿ ಅಭಿನಂದಿಸಲಾಯಿತು.

ಇದೇ ಸಂದರ್ಭದಲ್ಲಿ ಶಿಮುಂಜೆಪರಾರಿ ಅವರ ಜೀವನ ಮತ್ತು ಸಾಹಿತ್ಯ ಸಾಧನೆಯ ವಿಚಾರ ಸಂಕಿರಣ ನಡೆದಿದ್ದು ಶಿಮುಂಜೆ ಪರಾರಿ ಅವರ ಜೀವನ ಸಾಧನೆಯ ಕುರಿತು ಕನ್ನಡ ವಿಭಾಗದ ಸಹ ಪ್ರಾಧ್ಯಾಪಕಿ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ, ಶಿಮುಂಜೆ ಅವರ 'ನಿತ್ಯಾನಂದ ವಚನ'ದ ಕುರಿತಾಗಿ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎನ್. ಉಪಾಧ್ಯ ಅವರು, ಶಿಮುಂಜೆ ಅವರ ಅನುವಾದ ಸಾಹಿತ್ಯದ ಕುರಿತಾಗಿ ಕವಿ, ಲೇಖಕ ಡಾ. ಕರುಣಾಕರ ಶೆಟ್ಟಿ, ತುಳು ಸಾಹಿತ್ಯಕ್ಕೆ ಶಿಮುಂಜೆ ಪರಾರಿ ಅವರ ಕೊಡುಗೆಯ ಕುರಿತಾಗಿ ಕವಿ, ಸಂಘಟಕ ಪೇತ್ರಿ ವಿಶ್ವನಾಥ ಶೆಟ್ಟಿ ಅವರು ಉಪನ್ಯಾಸ ನೀಡಿದರು.

ಹಿರಿಯ ಸಾಹಿತಿ, ಕವಿ ಬಿ.ಎಸ್. ಕುರ್ಕಾಲ್ ಅವರು ಸ್ವಾಗತಿಸಿದರು. ಕವಿ, ಸಾಹಿತಿ ಜೀವಿ ಕುಲಕರ್ಣಿ ಅವರು ಅಭಿನಂದನ ಭಾಷಣಗೈದರು.

*PAGE DONATED BY : **SHRI V. G. BHAT, NIGDI***

ಸಮಾರಂಭದಲ್ಲಿ ವಿದುಷಿ ವೀಣಾ ಶಾಸ್ತ್ರಿ, ಲಕ್ಷ್ಮೀ ಶೆಟ್ಟಿ ಹಾಗೂ ಸುಶೀಲಾ ದೇವಾಡಿಗ ಅವರ ಕಾವ್ಯಗಾಯನ ಕಾರ್ಯಕ್ರಮ ನಡೆಯಿತು. ಸಂಘಟಕ ಪೇಟೆಮನೆ ಪ್ರಕಾಶ್ ಶೆಟ್ಟಿ ಅವರು ಕಾರ್ಯಕ್ರಮ ನಿರೂಪಿಸಿದರು. ಸಂಪಾದಕ ಮಂಡಳಿಯ ಜಿ.ಟಿ. ಆಚಾರ್ಯ ವಂದಿಸಿದರು. ಎಸ್.ಕೆ. ಸುಂದರ್, ವಿಭಾಗದ ವಿದ್ಯಾರ್ಥಿಗಳಾದ ಶಿವರಾಜ ಎಂ. ಜಿ., ಪರ್ಸಪ್ಪ ಹರಿಜನ್, ಸುರೇಖಾ ದೇವಾಡಿಗ, ಅನಿತಾ ಶೆಟ್ಟಿ, ರೂಪಾ ಸಂಗೊಳ್ಳಿ, ಅಶೋಕ್ ವಳದೂರು, ಸಂತೋಷ್ ಮೊಗವೀರ, ಸೂರಪ್ಪ ಕುಂದರ್ ಮೊದಲಾದವರು ಸಹಕರಿಸಿದರು. ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು, ಶಿಮುಂಜೆ ಅವರ ಅಭಿಮಾನಿಗಳು ಉಪಸ್ಥಿತರಿದ್ದರು.

## ಕರ್ನಾಟಕ ಸಂಘ ಮುಂಬಯಿ ಸಾಹಿತ್ಯ ಭಾರತಿ – ಸಾಹಿತ್ಯ ಚಿಂತನ – 30



ಉಪನ್ಯಾಸಕಾರ ಮೋಹನ ನಾಗಮ್ಮನವರ ಅವರನ್ನು ಗಣ್ಯರು ಗೌರವಿಸುವುದು. ಗೌ. ಕಾರ್ಯದರ್ಶಿ ಓಂದಾಸ ಕಣ್ಣಂಗಾರ್, ಸಮಿತಿ ಸದಸ್ಯ ಡಾ. ಎಸ್. ಕೆ. ಭವಾನಿ ಮತ್ತು ಗೌ. ಕೋಶಾಧಿಕಾರಿ ಎಮ್. ಡಿ. ರಾವ್

**'ಕವಿತೆ ಒಂದು ಧ್ಯಾನ, ತಾನಾಗಿ ಅರಳಿಕೊಳ್ಳುವಂತದ್ದು' : ಮೋಹನ ನಾಗಮ್ಮನವರ –** ನಾನೋರ್ವ ಕವಿಯಾಗಿದ್ದೇನೆಂದು ಹಾರ - ತುರಾಯಿ ನಾನೇ ಹಾಕಿಸಿಕೊಳ್ಳಬೇಕೆಂದಾಗ ನನಗೆ ತುಂಬಾ ಸಂಕೋಚವಾಗುತ್ತದೆ.

ಮನದ ಭಾವನೆಗಳಿಗೆ ಬಿಡುಗಡೆ ಬೇಕಿತ್ತು ಅದಕ್ಕಾಗಿ ಬರೆದೆ. ಕವಿತೆ ಎನ್ನುವುದನ್ನು ಒಂದು ಪ್ರಯೋಗವಾಗಿ ಒಪ್ಪಿಕೊಂಡಿದ್ದೇನೆ. ತನ್ನ ಒಳಗಿನ ಸಂವೇದನೆಗಳನ್ನು ಹೊರಹಾಕಲು ಹಲವಾರು ಕವಿತೆ ಬರೆದರೂ ಯಾವುದಕ್ಕೂ ಶಿಸ್ತು ಎಂಬುದು ಇರಬೇಕಾಗುತ್ತದೆ. ಕವಿತೆ ಹೇಗಿರಬೇಕು. ಕವಿತೆ ಕೇಳುವವರಲ್ಲಿ ಪ್ರಭಾವವನ್ನು ಮೂಡಿಸುವಂತಿರಬೇಕು. ಕವಿತೆ ಒಂದು ಧ್ಯಾನ. ಅದು ತಾನಾಗೇ ಅರಳಿಕೊಳ್ಳುವಂತದ್ದು. ಯಾವುದಕ್ಕೆ ಸತ್ವವಿರುತ್ತದೆ, ಸಾಮರ್ಥ್ಯವಿರುತ್ತದೆ, ಅದು ತಾನಾಗಿಯೇ ಮುದ್ರಿಸಿಕೊಳ್ಳುತ್ತದೆ ಎಂದು ಖ್ಯಾತ ಕವಿ, ಲೇಖಕ, ಚಿಂತಕ ಮೋಹನ್‌ನಾಗಮ್ಮನವರ ಅವರು ಹೇಳಿದರು.

ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘ ಮುಂಬಯಿ ಇದರ ಸಾಹಿತ್ಯ ಭಾರತಿ-ಸಾಹಿತ್ಯ ಚಿಂತನ 30 ರ ಕಾರ್ಯಕ್ರಮವು ಸಂಘದ ಸಮರಸ ಭವನದಲ್ಲಿ ದಿನಾಂಕ 16 ಎಪ್ರಿಲ್‌ರಂದು ಆಯೋಜಿಸಿದ್ದು ಅವರು 'ಕವಿತೆ ನಾ ಕಂಡಂತೆ' ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಅಶೋಕ ರಾಜನ ಪಂಚತತ್ವ ಸ್ಮಾರಕಗಳು ವಿಧ್ವಂಸಗೊಂಡರೂ ಅದರ ಮಹಾನತೆ ಈಗಲೂ ಉಳಿದುಕೊಂಡಿದೆ. ಕವಿತೆಯೂ ಹಾಗೆಯೇ ಅದರಲ್ಲಿ ಸಾಮರ್ಥ್ಯವಿದ್ದರೆ ಉಳಿದುಕೊಳ್ಳುತ್ತದೆ. ಸ್ವಾತಂತ್ರ್ಯದ ಮಹತ್ವ ಜೈಲಿನಲ್ಲಿದ್ದಾಗ ಗೊತ್ತಾಗುತ್ತದೆ. ನಾನು ಜೈಲಿನಲ್ಲಿದ್ದು ಬರೆದ ಕವಿತೆಗಳು ನನಗೆ ಬಹಳ ಇಷ್ಟದ ಕವಿತೆಗಳು. ಕವಿತೆಗಳು ಎಲ್ಲವೂ ಶ್ರೇಷ್ಠವಾಗಬೇಕೆಂತಿಲ್ಲ. ನಮ್ಮ ಮನ ತಟ್ಟುವಂತಿರಬೇಕು. ಕವಿಯ ಆಶಯ ತಿಳಿಯುವಂತಿರಬೇಕು. ಪುರಂದರ ದಾಸ, ಕನಕ ದಾಸ, ಶಿಶುನಾಳ ಶರೀಫರ ಹಾಡುಗಳನ್ನು ಜನರು ಈಗಲೂ ಹಾಡುತ್ತಾರೆ. ಸೌಹಾರ್ದತೆ, ಸಹಬಾಳ್ವೆ, ಸಮಾನತೆ ಸಂವಿಧಾನದ ತತ್ವವಾಗಿದೆ ಎಂದು ಹೇಳಿ ಸಮಾನತೆ ಬಗ್ಗೆ ಸಾರಿದ ಬಸವಣ್ಣ, ಸಿದ್ಧರಾಮಯ್ಯರವರ ವಚನಗಳು ಹಾಗೂ ಬಾಬಾಸಾಹೇಬ ಅಂಬೇಡ್ಕರ ತತ್ವಗಳ ಬಗ್ಗೆ ತಿಳಿಸಿದರು ನಂತರ ಮೋಹನ ನಾಗಮ್ಮನವರ ಸ್ವತಃರಚಿಸಿದ ಕೆಲವು ಕವಿತೆಗಳನ್ನು ಹಾಡಿದರು.

ಸಂಘದ ಗೌ. ಕೋಶಾಧಿಕಾರಿ ಎಂ. ಡಿ. ರಾವ್, ಕಾರ್ಯಕಾರಿ ಸಮಿತಿ ಸದಸ್ಯ ಡಾ. ಎಸ್. ಕೆ. ಭವಾನಿ ಹಾಗೂ ಸಂಘದ ಗೌ. ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಅವರು ಉಪನ್ಯಾಸಕಾರ ಮೋಹನ ನಾಗಮ್ಮನವರ ಅವರಿಗೆ ಶಾಲು ನೆನಪಿನ ಕಾಣಿಕೆ, ಪುಸ್ತಕ ಗೌರವ ನೀಡಿ ಗೌರವಿಸಿದರು. ಗೌ. ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ನಿರೂಪಣೆ ಹಾಗೂ ಧನ್ಯವಾದಾರ್ಪಣೆಗೈದರು.

## ಸದಾನಂದ ಹೆಗಡೆ ಕಟ್ಟೆ – 80ನೇ ಜನ್ಮದಿನಾಚರಣೆ



ಶ್ರೀ ಅಖಿಲ ಹವ್ಯಕ ಮಹಾಸಭೆಯ ಮಾಜಿ ನಿರ್ದೇಶಕ, ಹಿರಿಯ ಪತ್ರಕರ್ತ, ಲೇಖಕ ಸದಾನಂದ ಹೆಗಡೆಕಟ್ಟೆ ಅವರ 80ನೆ ಜನ್ಮದಿನಾಚರಣೆಯನ್ನು ಮೂಡಬಿದಿರೆಯ ಪ್ರೆಸ್ ಕ್ಲಬ್ ಆಶ್ರಯದಲ್ಲಿ ಮಾರ್ಚ್ 6, 2016 ರಂದು ಆಚರಿಸಲಾಯಿತು.

ಸಚಿವ ಶ್ರೀ ಕೆ. ಅಭಯಚಂದ್ರ ಜೈನ್, ಮಾಜಿ ಸಚಿವ ಶ್ರೀ ಕೆ. ಅಮರನಾಥ ಶೆಟ್ಟಿ, ಪುರಸಭಾ ಅಧ್ಯಕ್ಷೆ ಶ್ರೀಮತಿ ರೂಪ ಎಸ್. ಶೆಟ್ಟಿ, ಪ್ರೆಸ್ ಕ್ಲಬ್ ಅಧ್ಯಕ್ಷ ಎಂ. ಗಣೇಶ್ ಕಾಮತ್ ಹಾಗೂ ಶ್ರೀಮತಿ ಪ್ರೇಮ ಹೆಗಡೆಕಟ್ಟೆ ಹಾಗೂ ಕುಟುಂಬಸ್ಥರು ಉಪಸ್ಥಿತರಿದ್ದರು.

*PAGE DONATED BY : **SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT (DEC. 2012)***

## ನೂತನ ವಿದ್ಯಾರ್ಥಿ ನಿಲಯದ ಉದ್ಘಾಟನೆ

ಮಲ್ಲೇಶ್ವರಂನಲ್ಲಿರುವ ಶ್ರೀ ಅಖಿಲ ಹವ್ಯಕ ಮಹಾಸಭಾದ ನೂತನ ವಿದ್ಯಾರ್ಥಿ ನಿಲಯ ಸಮುಚ್ಚಯದ ಲೋಕಾರ್ಪಣಾ ಸಮಾರಂಭ ದಿನಾಂಕ 21.02.2016ರಂದು ನಡೆಯಿತು. ಅದನ್ನು ಉದ್ಘಾಟಿಸಿ ಮಾತನಾಡುತ್ತಾ ಹವ್ಯಕ ಸಮುದಾಯದಲ್ಲಿ ಸಾಕಷ್ಟು ಪ್ರತಿಭಾವಂತ ಯುವಕ ಯುವತಿಯರಿದ್ದಾರೆ. ಅವರ ಪ್ರತಿಭೆಗೆ ಪ್ರೋತ್ಸಾಹ ನೀಡಿ ತಮ್ಮದೇ ಆದ ಸ್ಮಾರ್ಟ್ ಆಪ್‌ಗಳನ್ನು ಅನುಕೂಲವಾಗುವಂತೆ ವ್ಯವಸ್ಥೆ ಕಲ್ಪಿಸಲು ಸಿದ್ಧರಿರುವುದಾಗಿ ಮಲ್ಲೇಶ್ವರಂ ಕ್ಷೇತ್ರದ ಶಾಸಕರಾದ ಡಾ। ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

‘ಸಂಭ್ರಮ’ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಶಾಸಕರಾದ ಶಿವರಾಮ ಎಂ. ಹೆಬ್ಬಾರ್, ವಿವಿಧ ಕ್ಷೇತ್ರಗಳಲ್ಲಿ ಹವ್ಯಕ ಸಮುದಾಯದವರ ಕೊಡುಗೆ ಅಪಾರ ಎಂದರು. ಶಾಸಕರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ ಹವ್ಯಕ ಸಮಾಜದ ಸಂಸ್ಕೃತಿ-ಸಂಪ್ರದಾಯ ಇತ್ತೀಚೆಗೆ ಕಾಣೆಯಾಗುತ್ತಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು. ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಕೇಂದ್ರ ಸಚಿವರಾದ ಎಚ್.ಎನ್. ಅನಂತಕುಮಾರ ಮಾತನಾಡಿ ಹವ್ಯಕರ ಸಂಸ್ಕೃತಿ ಹಾಗೂ ಸಂಪ್ರದಾಯದ ವಿಶಿಷ್ಟತೆಯನ್ನು ಕೊಂಡಾಡಿದರು.

ಅಖಿಲ ಹವ್ಯಕ ಮಹಾಸಭೆಯ ಎಸ್.ಜಿ. ಹೆಗಡೆ, ನಿರ್ಮಾಣ ಸಮಿತಿ ಗೌರವಾಧ್ಯಕ್ಷರಾದ ಎಂ.ಎನ್. ಭಟ್ಟ ಮದ್ಗುಣಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಹಿರಿಯ ಉಪಾಧ್ಯಕ್ಷರಾದ ವೆಂಕಟನಾರಾಯಣ, ಕೆನರಾ ಬ್ಯಾಂಕ್ ಮುಖ್ಯ ಮಹಾಪ್ರಬಂಧಕರಾದ ಎಸ್.ಎಸ್. ಭಟ್ಟ, ಮಹಾಸಭೆಯ ಗೌರವ ಪ್ರಧಾನ ಕಾರ್ಯದರ್ಶಿ ಎಂ. ಕೃಷ್ಣಮೂರ್ತಿ, ನಿರ್ಮಾಣ ಸಮಿತಿ ಗೌರವ ಪ್ರಧಾನ ಕಾರ್ಯದರ್ಶಿ ಎಂ. ಆರ್. ಮಂಜುನಾಥ ಮುಟಗುಪ್ಪೆ, ಮಹಾಸಭೆಯ ಉಪಾಧ್ಯಕ್ಷರಾದ ಬಿ. ಶಿವಶಂಕರ ಭಟ್ಟ, ಡಿ.ವಿ. ಹೆಗಡೆ ಹಾರೂಗಾರ್ ಮುಂತಾದ ಗಣ್ಯರು ಉಪಸ್ಥಿತರಿದ್ದರು. ದಿನಾಂಕ 13.02.2016 ಹಾಗೂ 14.02.2016ರಂದು ಧಾರ್ಮಿಕ ವಿಧಿ ವಿಧಾನಗಳ ಮೂಲಕ ಪ್ರವೇಶೋತ್ಸವ ನಡೆಯಿತು. 14.02.2016 ರಂದು ಕೆನರಾ ಬ್ಯಾಂಕ್‌ನ ಆರ್ಥಿಕ ನೆರವಿನಿಂದ ಸುಸಜ್ಜಿತವಾದ ಗ್ರಂಥಾಲಯವನ್ನು ಉದ್ಘಾಟಿಸಲಾಯಿತು.

## Mr V N Heggade is Elected as FNAE

The Indian National Academy of Engineering (INAE) founded in 1987 comprises India's most distinguished engineers, engineer-scientists and technologists covering the entire spectrum of engineering disciplines, and functions as an apex body to promote and advance the practice of engineering and technology and the related sciences and disciplines in India and their application to problems of national importance.

The Academy honours Indian and Foreign nationals who are elected by "peer" committees in recognition of their personal achievements in "Engineering" which are of exceptional merit and demonstrated distinctive eminence in the new and developing fields of technology. Our life member Mr V N Heggade (LM 745) has been conferred with this prestigious 'Fellowship' for the year 2015 in the field of Civil Engineering.



## Donation



Received donation of Rs. 500 on the occasion of marriage of Chi. Sou. Praseeda daughter of Smt. Chetana Pandit and Shri S. G. Pandit (Grand daughter of Smt. Parvati Hegde and Shri S. V. Hegde) with Chi. Rakesh (Res.-London) Son of Smt. Sharada Bhat and Shri M. Ganesh Bhat, at Bangalore on 1-1-2016.

We wish happy and prosperous married life to the newly married couple.

UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

***ADVT.***

*Page Donated by : **Shri Suhas Gunishastri,** Prabhadevi In the memory of his parents **Late Smt. Rajeshwari & Late Shri P. V. Gunishastri ,** Past President, H.W.T.*

*'Havyaka Sandesha' May 2016*

***RNI NO. MAHBIL / 2000 / 746,***
***Postal R.NO. MCN/161/2015-2017***
***WPP License No. MR / Tech / WPP-130 / North / 2016***
***'Licence to post without prepayment'***

| | |
|---|---|
| ***Posted at Mumbai Patrika Channel Stg. Office Mumbai - 400 001*** <br> **Date of Publication : 1st of every month** **REGISTERED NEWSPAPER** | **Date of Posting :** <br> **2nd, 3rd of every month** |
| ***If undelivered, please return to :*** <br> **HAVYAKA WELFARE TRUST** <br> B-207, Valmiki Apts., Near Pharmacy College, Sundar Nagar, Kalina, Vidyanagari P. O., Mumbai - 400 098. ✆ 2665 2591 <br> **E-mail : havyakamumbai@hotmail.com** <br> **Visit : www.havyakamumbai.com** <br><br> Published by Narayan Akadas R. <br> for Havyaka Welfare Trust, Mumbai - 400 098. <br> being printed at M/s. Navin Printers, Mumbai - 400 016. <br> Hon. Editor : **Smt. Amita S. Bhagwat** | **To,** |


# Gravitational Waves

✍ **Swetha Bhagwat**
**Member of Syracuse University Gravitational Waves Group**



On September 14th 2015, LIGO detected the first gravitational wave from a binary system that comprised of two black holes. The signal was very clear and loud in both the LIGO detectors and came from two, nearly 30 solar mass black holes, spiraling in and eventually merging to form a final black hole. This discovery is also the first direct detection of black holes.

Gravitational waves are known to be very weak and their detection involves careful data analysis that includes 'match-filtering' - a technique where you compare the data against the expected signal models to find very faint signals buried in noise. Most of the signals that we expect are so weak that we do not expect to see any thing meaningful by just plotting the raw data. However, this particular signal that we detected on 14th September 2015 was so loud that with some very minimal data conditioning filters, we could see a clean chirp signal - a signal that increases in both frequency and amplitude with time. This is a signature wave emitted when two compact bodies like black holes orbit around each other. This was followed by a very visible exponentially damped sinusoidal signal called 'the ringdown' which is a characteristic of the final black hole formed after the merger. When I was looking at the raw data, I was astonished to see how clearly we could see the patterns of the data matching the models by just plotting the two on top of each other and eye-balling them. Apart from looking at the raw data, I primarily concentrated on looking at the ringdown part of the signal which contains information about the final black hole. This part of the signal is very special because it is completely determined by the mass and spin of the final black hole, and it comes out of the boundary conditions that define black holes - the event horizon.

Several specialized data-analysis pipelines developed by LIGO have been used to detect and independently validate this beautiful discovery. Here at the Syracuse University Gravitational Wave Group, we analyzed the data with one of the major analysis pipelines, which we both develop and maintain, that is specifically targeted towards detection of gravitational waves emitted by coalescing compact binaries. This pipeline detected the signal with a confidence of 5.1 sigma. One of the things that I found fascinating about this event was that it was so clear and loud, and even the un-modeled searches (the search algorithm that doesn't use the expected signal model to detect the gravitational waves) found it.

On the data analysis side, we still have not completed analysis of all the data taken from the detector during this run and we are excited to see what the rest of the data sets may contain. On the theory aspect, this signal contains a lot of information on black holes and their physics, especially because the signal was sufficiently loud. Detection of gravitational waves test the validity of General Theory of Relativity in the strong field regime. This is one of the greatest experimental success that we have seen in Physics. The most exciting thing is probably for the astronomers who will now have a whole new way for detecting exotic astrophysical systems.

*PAGE DONATED BY : **SMT. TRIVENI BHATSHIKAR & SHRI R. T. BHATSHIKAR,** GHATKOPAR IN THE MEMORY OF **LATE SHRI T. R. BHATSHIKAR***